Mobile Edition

Version 1.0

# ಮಕ್ಕಳನ್ನು ಬೆಳೆಸುವುದು ಹೇಗೆ?

ಶೈಖ್ ಅಬ್ದುರ್ರಝ್ಝಾಕ್ ಬಿನ್ ಅಬ್ದುಲ್ ಮುಹ್ಸಿನ್ ಅಲ್‌ಬದ್ರ್

Manhaj-Al-Ambiya
MANGALURU
www.alambiya.com

ALL RIGHTS RESERVED © جميع الحقوق محفوظة

No part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the translator

**First Mobile Edition: Sep 2023**

Author:
**Shaykh Abdur Razaq Ibn Abdul Muhsin Al-Badr**

Translated by:
**Mohammad Hamza**

Book designed by:
**Image Media Solutions, Puttur**

*Publishers*

**Manhaj-Al-Ambiya**

Majestic Towers, 1st Floor, Pandeshwar, MANGALURU

www.alambiya.com

# ವಿಷಯಸೂಚಿ


1. ಪ್ರಸ್ತಾವನೆ ........................................... 5
2. ಮಕ್ಕಳು ವಿಶ್ವಸ್ತತೆ (ಅಮಾನತ್) ಆಗಿದ್ದಾರೆ .... 9
3. ತಂದೆ ಮಕ್ಕಳನ್ನು ರೂಪಿಸುತ್ತಾನೆ............... 16
4. ನರಕಾಗ್ನಿಯಿಂದ ಮಕ್ಕಳನ್ನು ರಕ್ಷಿಸುವ ಹೊಣೆಗಾರಿಕೆ ..................................... 24
5. ಮಕ್ಕಳಿಗೆ ಶಿಸ್ತು ಕಲಿಸುವುದು ಮತ್ತು ಶಿಕ್ಷಣ ನೀಡುವುದು ....................................... 28
    - ಮಕ್ಕಳಿಗೆ ಶಿಸ್ತು ಕಲಿಸುವುದು...................... 28
    - ಮಕ್ಕಳಿಗೆ ಶಿಕ್ಷಣ ನೀಡುವುದು .................... 29
    - ಮಕ್ಕಳಿಗೆ ಏಳು ವರ್ಷವಾದಾಗ ನಮಾಝ್ ಮಾಡಲು ಅಜ್ಞಾಪಿಸುವುದು. ..................... 33
    - ಹತ್ತು ವರ್ಷವಾದರೂ ನಮಾಝ್ ಮಾಡದಿದ್ದರೆ ಹೊಡೆಯುವುದು................................... 39
    - ಹಾಸಿಗೆಗಳಲ್ಲಿ ಅವರನ್ನು ಬೇರೆ ಬೇರೆಯಾಗಿ ಮಲಗಿಸುವುದು..................................... 39


ನೇರವಾಗಿ ವಿಷಯಕ್ಕೆ ಧುಮುಕಲು ಶೀರ್ಷಿಕೆಯನ್ನು ಸ್ಪರ್ಶಿಸಿ

6. ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಉಪಯುಕ್ತ ನಿರ್ದೇಶನಗಳು ................... 47

- ಧರ್ಮನಿಷ್ಠ ಹೆಂಡತಿಯನ್ನು ಆಯ್ಕೆ ಮಾಡುವುದು ............................................................ 47
- ಸಜ್ಜನ ಮಕ್ಕಳಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುವುದು .................................... 49
- ಉತ್ತಮ ಹೆಸರನ್ನು ಆಯ್ಕೆ ಮಾಡುವುದು ...... 54
- ಸಂಭೋಗದ ಸಮಯದಲ್ಲಿ ಅಲ್ಲಾಹನಿಂದ ರಕ್ಷಣೆ ಪಡೆಯುವುದು..................................... 56
- ತಂದೆಯು ನೀತಿವಂತ ಮಾದರಿಯಾಗಿರುವುದು ............................................................ 58
- ಒಳಿತನ್ನು ಆಜ್ಞಾಪಿಸುವುದು ಮತ್ತು ಕೆಡುಕನ್ನು ವಿರೋಧಿಸುವುದು.................................. 62
- ಮಕ್ಕಳ ಚಾರಿತ್ರ್ಯವನ್ನು ಕೆಡಿಸುವ ವಿಷಯಗಳಿಂದ ಅವರನ್ನು ದೂರವಿಡುವುದು ..................... 67
- ಮಕ್ಕಳಿಗೆ ನೀತಿವಂತ ಗೆಳೆಯರನ್ನು ಆಯ್ಕೆ ಮಾಡುವುದು........................................ 68
- ಪವಿತ್ರ ಕುರ್‌ಆನ್ ಅನ್ನು ಪ್ರೀತಿಸುವಂತೆ ಮಕ್ಕಳನ್ನು ಬೆಳೆಸುವುದು.......................... 70
- ಮಕ್ಕಳ ಶಾಲಾ ವಿದ್ಯಾಭ್ಯಾಸವನ್ನು ಹತ್ತಿರದಿಂದ ಗಮನಿಸುವುದು..................................... 72

ನೇರವಾಗಿ ವಿಷಯಕ್ಕೆ ಧುಮುಕಲು ಶೀರ್ಷಿಕೆಯನ್ನು ಸ್ಪರ್ಶಿಸಿ

# ಪ್ರಸ್ತಾವನೆ

ನಿಶ್ಚಯವಾಗಿಯೂ, ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು. ನಾವು ಅವನನ್ನು ಸ್ತುತಿಸುತ್ತೇವೆ, ಅವನ ಸಹಾಯ ಮತ್ತು ಕ್ಷಮೆಯನ್ನು ಬೇಡುತ್ತೇವೆ, ಮತ್ತು ಅವನ ಮುಂದೆ ಪಶ್ಚಾತ್ತಾಪಪಡುತ್ತೇವೆ. ನಾವು ನಮ್ಮ ದುಷ್ಕರ್ಮಗಳಿಂದ ಮತ್ತು ನಮ್ಮ ಕರ್ಮಗಳ ದುಷ್ಪರಿಣಾಮಗಳಿಂದ ಅಲ್ಲಾಹನಲ್ಲಿ ಅಭಯಕೋರುತ್ತೇವೆ. ಅಲ್ಲಾಹು ಯಾರಿಗೆ ಮಾರ್ಗದರ್ಶನ ಮಾಡುತ್ತಾನೋ, ಅವನನ್ನು ಯಾರೂ ದಾರಿತಪ್ಪಿಸಲಾರರು; ಮತ್ತು ಅಲ್ಲಾಹು ಯಾರನ್ನು ದಾರಿತಪ್ಪಿಸುತ್ತಾನೋ, ಅವನಿಗೆ ಯಾರೂ ಮಾರ್ಗದರ್ಶನ ಮಾಡಲಾರರು. ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಅನ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು ಎಂದು ನಾನು ಸಾಕ್ಷಿ ವಹಿಸುತ್ತೇನೆ; ಮತ್ತು ಮುಹಮ್ಮದ್(ﷺ) ಅವನ ದಾಸರು ಮತ್ತು ಸಂದೇಶವಾಹಕರು ಎಂದು ನಾನು ಸಾಕ್ಷಿ ವಹಿಸುತ್ತೇನೆ. ಮುಂದುವರಿದು ಹೇಳುವುದೇನೆಂದರೆ:

ಸಹೋದರರರೇ! ಈ ಚಿಕ್ಕ ಕೃತಿಯಲ್ಲಿರುವ

ವಿಷಯವು ಪ್ರತಿಯೊಬ್ಬ ಮುಸಲ್ಮಾನನು ಗಂಭೀರವಾಗಿ ಪರಿಗಣಿಸಬೇಕಾದ ಮತ್ತು ಪ್ರಾಮುಖ್ಯತೆ ನೀಡಬೇಕಾದ ಒಂದು ವಿಷಯವಾಗಿದೆ. ಇದು ಪ್ರತಿಯೊಬ್ಬ ಮುಸ್ಲಿಮನು ತಿಳಿದಿರಬೇಕಾದ ಒಂದು ಗುರುತರ ಮತ್ತು ಅಪಾಯಕಾರಿ ವಿಷಯವಾಗಿದೆ. ಇಸ್ಲಾಮಿನಲ್ಲಿ ಮಕ್ಕಳನ್ನು ಬೆಳೆಸುವುದು, ಅವರಿಗೆ ಶಿಸ್ತು ಕಲಿಸುವುದು, ಅವರಿಗೆ ಶಿಕ್ಷಣ ನೀಡುವುದು, ಯುವಕರ ನಡವಳಿಕೆಯನ್ನು ಸರಿಪಡಿಸುವುದು ಮತ್ತು ಅವರಿಗೆ ತಿಳುವಳಿಕೆ ನೀಡುವುದು ಆ ವಿಷಯವಾಗಿದೆ. ಇದು ಕುಟುಂಬದ ಮುಖ್ಯಸ್ಥನಾದ ತಂದೆಯ ಒಂದು ದೊಡ್ಡ ಜವಾ-ಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ನಿರ್ಲಕ್ಷಿ-ಸುವವನಿಗೆ, ಈ ಕರ್ತವ್ಯವನ್ನು ಅವಗಣಿಸುವವ-ನಿಗೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಅಲ್ಲಾಹನ ನಿರ್ದೇಶನಗಳನ್ನು ಪಾಲಿಸದವನಿಗೆ ತೀವ್ರ ರೀತಿಯ ಎಚ್ಚರಿಕೆಗಳು ಅನೇಕ ಹದೀಸ್‌ಗಳಲ್ಲಿ ವರದಿಯಾಗಿವೆ.

ಮಕ್ಕಳು ತಮ್ಮ ಪೋಷಕರಿಗೆ ತೋರಿದ ವಿಧೇಯತೆ, ಸೌಮ್ಯ ವರ್ತನೆ ಮತ್ತು ಕರ್ತವ್ಯ ನಿಷ್ಠೆಯ ಬಗ್ಗೆ ಪುನರುತ್ಥಾನ ದಿನದಂದು

ಅವರೊಡನೆ ಪ್ರಶ್ನಿಸಲಾಗುವಂತೆಯೇ, ತಮ್ಮ ಮಕ್ಕಳನ್ನು ಬೆಳೆಸಿದ ಬಗ್ಗೆ ಪೋಷಕರಲ್ಲಿಯೂ ಪ್ರಶ್ನಿಸಲಾಗುತ್ತದೆ. ಪುನರುತ್ಥಾನ ದಿನದಂದು ನಾವೆಲ್ಲರೂ ಅಲ್ಲಾಹನ ಮುಂದೆ ನಿಲ್ಲುವಾಗ ನಮ್ಮ ಮಕ್ಕಳ ಬಗ್ಗೆ ಅಲ್ಲಾಹು ನಮ್ಮಲ್ಲಿ ಪ್ರಶ್ನಿಸುತ್ತಾನೆ.

ಮಹಾನ್ ಸಹಾಬಿವರ್ಯರಾದ ಅಬ್ದುಲ್ಲಾ ಬಿನ್ ಉಮರ್ (ﷺ) ಹೇಳುತ್ತಾರೆ:

أَدِّبْ وَلَـــدَكَ، فَإِنَّكَ مَسْـــؤُولٌ عَنْهُ يَوْمَ الْقِيَامَةِ بِمَـــا أَدَّبْتَهُ وَمَـــاذَا عَلَّمْتَهُ؟

“ನಿಮ್ಮ ಮಕ್ಕಳಿಗೆ ಶಿಸ್ತು ಕಲಿಸಿರಿ; ನೀವು ಅವರಿಗೆ ಯಾವ ರೀತಿಯಲ್ಲಿ ಶಿಸ್ತು ಕಲಿಸಿದ್ದೀರಿ ಮತ್ತು ಅವರಿಗೆ ಏನು ಕಲಿಸಿದ್ದೀರಿ ಎಂದು ಪುನರುತ್ಥಾನ ದಿನದಂದು ಅಲ್ಲಾಹು ನಿಮ್ಮಲ್ಲಿ ಪ್ರಶ್ನಿಸುತ್ತಾನೆ.”

ಪುನರುತ್ಥಾನ ದಿನದಂದು ಅಲ್ಲಾಹು ನಿಮ್ಮ ಮಕ್ಕಳ ಬಗ್ಗೆ ನಿಮ್ಮಲ್ಲಿ ಪ್ರಶ್ನಿಸುತ್ತಾನೆ. ನೀವು ಮಕ್ಕಳನ್ನು ಯಾವುದರ ಆಧಾರದಲ್ಲಿ ಬೆಳೆಸಿದ್ದೀರಿ? ನೀವು ಅವರಿಗೆ ಏನು ಕಲಿಸಿದ್ದೀರಿ? ನೀವು ಅವರ

ವಿಷಯದಲ್ಲಿ ನಿಮ್ಮ ಕರ್ತವ್ಯಗಳನ್ನು ನಿರ್ವಹಿಸಿದ್ದೀರೋ ಇಲ್ಲವೋ? ಪುನರುತ್ಥಾನ ದಿನದಂದು ಅಲ್ಲಾಹು ಈ ಎಲ್ಲಾ ವಿಷಯಗಳ ಬಗ್ಗೆ ನಿಮ್ಮಲ್ಲಿ ಪ್ರಶ್ನಿಸುತ್ತಾನೆ. ಆದ್ದರಿಂದ ಸಹೋದರರೇ, ಆ ದಿನದ ಉತ್ತರವನ್ನು ಈಗಲೇ ಸಿದ್ಧಪಡಿಸುವುದು ನಿಮ್ಮ ಹೊಣೆಗಾರಿಕೆಯಾಗಿದೆ.

⇇ ವಿಷಯಸೂಚಿ

# ಮಕ್ಕಳು ವಿಶ್ವಸ್ತತೆ (ಅಮಾನತ್) ಆಗಿದ್ದಾರೆ

ಅಲ್ಲಾಹು ಹೇಳುತ್ತಾನೆ:

﴿ إِنَّمَآ أَمۡوَٰلُكُمۡ وَأَوۡلَٰدُكُمۡ فِتۡنَةٞۚ
وَٱللَّهُ عِندَهُۥٓ أَجۡرٌ عَظِيمٞ ١٥ ﴾

“ನಿಮ್ಮ ಆಸ್ತಿ ಮತ್ತು ನಿಮ್ಮ ಮಕ್ಕಳು ಒಂದು ಪರೀಕ್ಷೆಯಾಗಿದ್ದಾರೆ.” [ಸೂರ ತಗಾಬುನ್ 64:15]

ಅಲ್ಲಾಹು ನಿಮ್ಮ ಮೇಲೆ ಉದಾರತೆಯನ್ನು ತೋರಿ ಮತ್ತು ನಿಮಗೆ ಒಂದು ಪರೀಕ್ಷೆಯಾಗಿ ನಿಮಗೆ ಗಂಡು ಮತ್ತು ಹೆಣ್ಣು ಮಕ್ಕಳನ್ನು ದಯಪಾಲಿಸಿದನು — ಅವರೊಂದು ಪರೀಕ್ಷೆಯಾಗಿದ್ದಾರೆ — ನೀವು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತೀರೋ, ಅವರಿಗೆ ಶಿಸ್ತು ಮತ್ತು ಉತ್ತಮ ನಡವಳಿಕೆಯನ್ನು ಕಲಿಸುತ್ತೀರೋ; ಅಥವಾ ನೀವು ಈ ವಿಶ್ವಸ್ತತೆಯನ್ನು ನಿರ್ಲಕ್ಷಿಸಿ ನಿಮಗೆ ವಹಿಸಿಕೊಡಲಾದ ಈ ಕರ್ತವ್ಯವನ್ನು ಅವಗಣಿಸುತ್ತೀರೋ ಎಂದು ನಿಮ್ಮನ್ನು

ಪರೀಕ್ಷಿಸುವುದಕ್ಕಾಗಿ ಅಲ್ಲಾಹು ನಿಮಗೆ ಮಕ್ಕಳನ್ನು ನೀಡುತ್ತಾನೆ.

ಖಂಡಿತವಾಗಿಯೂ ವಿಶ್ವಾಸ ಮತ್ತು ಸ್ವರ್ಗ ಪ್ರವೇಶದ ಬಗ್ಗೆ ಪ್ರಮಾಣಪತ್ರ ಪಡೆದ ಸತ್ಯ-ವಿಶ್ವಾಸಿಗಳ ಗುಣಗಳಲ್ಲಿ ಒಂದು ಏನೆಂದರೆ, ಅಲ್ಲಾಹು ಅವರಿಗೆ ವಹಿಸಿಕೊಟ್ಟ ವಿಶ್ವಸ್ಥತೆಯನ್ನು (ಅಮಾನತ್) ಅವರು ಬಹಳ ಕಾಳಜಿಯಿಂದ ಸಂರಕ್ಷಿಸುತ್ತಾರೆ. ಸೂರ ಮೂಮಿನೂನ್‌ನ ಆರಂಭದಲ್ಲಿ ಅಲ್ಲಾಹು ಅವರ ಬಗ್ಗೆ ಪ್ರಶಂಸಿಸುತ್ತಾ ಹೇಳುತ್ತಾನೆ:

﴿قَدۡ أَفۡلَحَ ٱلۡمُؤۡمِنُونَ ١﴾

“ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳು ಯಶಸ್ವಿಯಾದರು.” [ಸೂರ ಮೂಮಿನೂನ್ 23:1]

ನಂತರ ಅವರ ಗುಣಗಳನ್ನು ಒಂದೊಂದಾಗಿ ವಿವರಿಸುತ್ತಾ ಅಲ್ಲಾಹು ಹೇಳುತ್ತಾನೆ:

﴿ وَٱلَّذِينَ هُمۡ لِأَمَٰنَٰتِهِمۡ وَعَهۡدِهِمۡ
رَٰعُونَ ٨ وَٱلَّذِينَ هُمۡ عَلَىٰ صَلَوَٰتِهِمۡ
يُحَافِظُونَ ٩ أُوْلَٰٓئِكَ هُمُ ٱلۡوَٰرِثُونَ
١٠ ٱلَّذِينَ يَرِثُونَ ٱلۡفِرۡدَوۡسَ
هُمۡ فِيهَا خَٰلِدُونَ ١١ ﴾

“ಅವರು ತಮ್ಮ ಅಮಾನತ್ತುಗಳನ್ನು (ವಿಶ್ವಸ್ತತೆಯನ್ನು) ಮತ್ತು ವಾಗ್ದಾನಗಳನ್ನು ಸಂರಕ್ಷಿಸುವವರು. ಅವರು ತಮ್ಮ (ಐದು ವೇಳೆಯ ಕಡ್ಡಾಯ) ನಮಾಝ್‌ಗಳ ಬಗ್ಗೆ ನಿಗಾ ವಹಿಸುವವರು. ಅವರೇ ವಾರಿಸುದಾರರು. ಅಂದರೆ ಫಿರ್ದೌಸ್ (ಸ್ವರ್ಗ) ಅನ್ನು ವಾರಿಸಾಗಿ ಪಡೆಯುವವರು. ಅವರು ಅದರಲ್ಲಿ ಶಾಶ್ವತವಾಗಿ ವಾಸಿಸುವರು.” [ಸೂರ ಮೂಮಿನೂನ್ 23:8-11]

ಅಮಾನತ್ತುಗಳ ಬಗ್ಗೆ ನಿಷ್ಠೆ ಪಾಲಿಸುವುದರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ يَٰٓأَيُّهَا ٱلَّذِينَ ءَامَنُواْ لَا تَخُونُواْ

ٱللَّهَ وَٱلرَّسُولَ وَتَخُونُوٓاْ أَمَٰنَٰتِكُمۡ
وَأَنتُمۡ تَعۡلَمُونَ ﴿٢٧﴾

“ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನ ಮತ್ತು ಅವನ ಸಂದೇಶವಾಹಕರ (ಹಕ್ಕುಗಳಲ್ಲಿ) ತಿಳಿದೂ ಸಹ ವಂಚನೆ ಮಾಡಬೇಡಿ; ನಿಮಗೆ ವಹಿಸಿಕೊಡಲಾದ ಅಮಾನತ್ತುಗಳಿಗೂ ವಂಚನೆ ಮಾಡಬೇಡಿ.” [ಸೂರ ಅನ್ಫಾಲ್ 8:27]

ಅಮಾನತ್ತನ್ನು ನಿರ್ಲಕ್ಷಿಸುವುದು ಮಹಾ ಅಪಾಯಕಾರಿ ಸಂಗತಿಯಾಗಿದೆ. ಅಮಾನತ್ತನ್ನು ಸಂರಕ್ಷಿಸುವುದು ಇಹಲೋಕ ಮತ್ತು ಪರಲೋಕದಲ್ಲಿ ಸೌಭಾಗ್ಯಶಾಲಿಗಳಾದ ಸತ್ಯವಿ-ಶ್ವಾಸಿಗಳ ಒಂದು ವಿಶಿಷ್ಟ ಗುಣವಾಗಿದೆ.

﴿وَٱلَّذِينَ هُمۡ لِأَمَٰنَٰتِهِمۡ
وَعَهۡدِهِمۡ رَٰعُونَ ﴿٨﴾

“ಅವರು ತಮ್ಮ ಅಮಾನತ್ತುಗಳನ್ನು (ವಿಶ್ವಸ್ತತೆಯ-ನ್ನು) ಮತ್ತು ವಾಗ್ದಾನಗಳನ್ನು ಸಂರಕ್ಷಿಸುವವರು.”

[ಸೂರ ಮೂಮಿನೂನ್ 23:8]

ಅಮಾನತ್ತುಗಳನ್ನು ಮತ್ತು ವಾಗ್ದಾನಗಳನ್ನು ಸಂರಕ್ಷಿಸುವುದು ಎಂದರೆ, ಅಲ್ಲಾಹು ನಮ್ಮ ಅಧೀನಕ್ಕೊಳಪಡಿಸಿದವರ ಬಗ್ಗೆ ಪ್ರಾಮಾಣಿಕವಾಗಿ ಕಾಳಜಿ ವಹಿಸುವುದು ಮತ್ತು ಅವರ ಕುರಿತಾದ ನಮ್ಮ ಬಾಧ್ಯತೆಯನ್ನು ನೆರವೇರಿಸುವುದು. ನಿಮ್ಮ ಮುಂದಿರುವ ನಿಮ್ಮ ಮಕ್ಕಳು — ಗಂಡು ಅಥವಾ ಹೆಣ್ಣು — ಅತಿದೊಡ್ಡ ಅಮಾನತ್ತಾಗಿ-ದ್ದಾರೆ. ಅವರು ಅಲ್ಲಾಹು ನಿಮಗೆ ಅನುಗ್ರಹವಾಗಿ ದಯಪಾಲಿಸಿದ ಅವನ ಉಡುಗೊರೆಯಾಗಿದ್ದಾರೆ.

﴿ لِّلَّهِ مُلْكُ ٱلسَّمَٰوَٰتِ وَٱلْأَرْضِ ۚ
يَخْلُقُ مَا يَشَآءُ ۚ يَهَبُ لِمَن يَشَآءُ إِنَٰثًا
وَيَهَبُ لِمَن يَشَآءُ ٱلذُّكُورَ ﴿٤٩﴾ ﴾

“ಭೂಮ್ಯಾಕಾಶಗಳ ಆಧಿಪತ್ಯವು ಅಲ್ಲಾಹನಿಗೆ ಸೇರಿದ್ದು. ಅವನು ಬಯಸುವುದನ್ನು ಅವನು ಸೃಷ್ಟಿಸುತ್ತಾನೆ. ಅವನು ಬಯಸುವವರಿಗೆ ಅವನು ಹೆಣ್ಣು ಮಗುವನ್ನು ಉಡುಗೊರೆಯಾಗಿ

ನೀಡುತ್ತಾನೆ ಮತ್ತು ಅವನು ಬಯಸುವವರಿಗೆ ಅವನು ಗಂಡು ಮಗುವನ್ನು ಉಡುಗೊರೆಯಾಗಿ ನೀಡುತ್ತಾನೆ." [ಸೂರ ಶೂರಾ 42:49]

ಮಕ್ಕಳು ಗಂಡಾಗಲಿ, ಹೆಣ್ಣಾಗಲಿ — ಅಲ್ಲಾಹನ ಉಡುಗೊರೆಯಾಗಿದ್ದಾರೆ. ಅಲ್ಲಾಹನ ಮೇಲಾಣೆ! ನಿಮ್ಮ ಮಕ್ಕಳ ಬಗ್ಗೆ ಪುನರುತ್ಥಾನ ದಿನದಂದು ಅಲ್ಲಾಹು ನಿಮ್ಮಲ್ಲಿ ಪ್ರಶ್ನಿಸುತ್ತಾನೆ; ಅಲ್ಲಾಹು ನಿಮ್ಮನ್ನು ವಿಚಾರಣೆ ಮಾಡುತ್ತಾನೆ.

ಪ್ರವಾದಿ (ﷺ) ರವರು ಹೇಳಿದರು:

«كُلُّكُـــمْ رَاعٍ وَكُلُّكُـــمْ مُسْـــؤُولٌ عَنْ رَعِيَّتِهِ » .

"ನೀವೆಲ್ಲರೂ ಹೊಣೆ ವಹಿಸಿಕೊಂಡವರು ಮತ್ತು ನಿಮ್ಮ ಹೊಣೆಯಲ್ಲಿರುವವರ ಬಗ್ಗೆ ನಿಮ್ಮೊಡನೆ ಪ್ರಶ್ನಿಸಲಾಗುವುದು."

ಇನ್ನೊಂದು ವರದಿಯಲ್ಲಿ ಹೀಗಿದೆ:

«وَالرَّجُـــلُ رَاعٍ عَلَـــى أَهْلِ بَيْتِـــهِ وَهُوَ

مَسْــــؤُولٌ عَنْ رَعِيَّتِـــهِ، وَالْمَــــرْأَةُ رَاعِيَةٌ
عَلَى بَيْتِ زَوْجِهَا وَوَلَدِهِ وَهِيَ مَسْــــؤُولَةٌ
عَنْهُمْ » .

“ಪುರುಷನು ಕುಟುಂಬದ ಹೊಣೆ ವಹಿಸಿಕೊಂಡವನು. ಅವನ ಹೊಣೆಯಲ್ಲಿ-ರುವವರ ಬಗ್ಗೆ ಅವನೊಡನೆ ಪ್ರಶ್ನಿಸಲಾಗು-ವುದು. ಮಹಿಳೆ ಗಂಡನ ಮನೆಯ ಮತ್ತು ಮಕ್ಕಳ ಹೊಣೆ ವಹಿಸಿಕೊಂಡವಳು. ಅವಳ ಹೊಣೆಯಲ್ಲಿ-ರುವವರ ಬಗ್ಗೆ ಅವಳೊಡನೆ ಪ್ರಶ್ನಿಸಲಾಗುವುದು.”

ಆದ್ದರಿಂದ ನೀವೆಲ್ಲರೂ ಹೊಣೆಗಾರಿಕೆಯುಳ್ಳವರು ಮತ್ತು ನಿಮ್ಮ ಹೊಣೆಗಾರಿಕೆಯ ಬಗ್ಗೆ ನಿಮ್ಮೊಡನೆ ಪ್ರಶ್ನಿಸಲಾಗುವುದು. ನಿಮ್ಮ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಕುಟುಂಬದ ಇತರ ಸದಸ್ಯರು ಇವರೆಲ್ಲರ ಬಗ್ಗೆ ಪುನರುತ್ಥಾನ ದಿನದಂದು ಅಲ್ಲಾಹು ನಿಮ್ಮೊಡನೆ ಖಂಡಿತ ಪ್ರಶ್ನಿಸುವನು.

ವಿಷಯಸೂಚಿ

# ತಂದೆ ಮಕ್ಕಳನ್ನು ರೂಪಿಸುತ್ತಾನೆ

ನಿಸ್ಸಂದೇಹವಾಗಿಯೂ ಮಕ್ಕಳು ತಂದೆಯಿಂದ ಪ್ರಭಾವಿತರಾಗುತ್ತಾರೆ. ತಂದೆಯ ವರ್ತನೆ, ಸ್ವಭಾವ, ಜನರೊಂದಿಗೆ ವ್ಯವಹರಿಸುವ ರೀತಿ-ನೀತಿ ಮತ್ತು ತಂದೆಯ ಧರ್ಮವು ಮಕ್ಕಳ ಮೇಲೆ ಗಾಢ ಪ್ರಭಾವ ಬೀರುತ್ತದೆ. ಮಕ್ಕಳ ಮೇಲೆ ಅತ್ಯಧಿಕ ಪ್ರಭಾವ ಬೀರುವ ವ್ಯಕ್ತಿಯೆಂದರೆ ತಂದೆ. ಒಂದು ನಾಣ್ಣುಡಿ ಹೀಗಿದೆ:

وَيَنْشَأُ نَاشِئُ الْفِتْيَانِ فِينَا

عَلَى مَا كَانَ عَوَّدَهُ أَبُوهُ

“ನಮ್ಮಲ್ಲಿನ ಒಬ್ಬ ಕಿರಿಯನು ನಮ್ಮ ನಡುವೆ ಬೆಳೆಯುವನು
ಅವನ ತಂದೆ ಅವನಿಗೆ ರೂಢಿ ಮಾಡಿಸಿದ ವಿಷಯಗಳ ಮೇಲೆ.”

ನೀವು ನಿಮ್ಮ ಮಕ್ಕಳಿಗೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದನ್ನು ಮತ್ತು ಅವನು ವಹಿಸಿದ ಹೊಣೆಗಳನ್ನು ನೆರವೇರಿಸುವುದನ್ನು ರೂಢಿ

ಮಾಡಿಸಿದರೆ, ಉದಾತ್ತ ಗುಣ, ಉನ್ನತ ಶಿಷ್ಟಾಚಾರ ಮತ್ತು ಉತ್ತಮ ಮಾತುಗಳನ್ನು ಕಲಿಸಿಕೊಟ್ಟರೆ, ಮಕ್ಕಳು ಅವುಗಳೊಡನೆ ಬೆಳೆಯುತ್ತಾರೆ. ಆದರೆ, ನೀವು ನಿಮ್ಮ ಮಕ್ಕಳಿಗೆ ಇದಕ್ಕೆ ವಿರುದ್ಧವಾದುದನ್ನು ರೂಢಿ ಮಾಡಿಸಿದರೆ, ನೀವು ರೂಢಿ ಮಾಡಿಸಿದ ವಿಷಯಗಳೊಡನೆ ಮಕ್ಕಳು ಬೆಳೆಯುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ, ಮಕ್ಕಳು ಒಳ್ಳೆಯ-ವರಾಗುವುದು ಅಥವಾ ಕೆಟ್ಟವರಾಗುವುದು ತಂದೆಯ ಒಳ್ಳೆಯತನ ಮತ್ತು ದುಷ್ಟತನದ ನೇರ ಪರಿಣಾಮವಾಗಿರುತ್ತದೆ. ತಂದೆ ದೇವಭಕ್ತ ಮತ್ತು ಧರ್ಮನಿಷ್ಠನಾಗಿದ್ದರೆ, ಹೆಚ್ಚಿನ ಸಂದರ್ಭದಲ್ಲೂ ಮಕ್ಕಳು ದೇವಭಕ್ತರು ಮತ್ತು ಧರ್ಮನಿಷ್ಠರಾಗು-ತ್ತಾರೆ. ಆದರೆ ತಂದೆ ಭ್ರಷ್ಟ ಮತ್ತು ದುಷ್ಟನಾಗಿದ್ದರೆ (ಅಲ್ಲಾಹು ಕಾಪಾಡಲಿ) ಹೆಚ್ಚಿನ ಸಂದರ್ಭಗಳ-ಲ್ಲೂ ಮಕ್ಕಳು ಕೂಡ ಹಾಗೆಯೇ ಬೆಳೆಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಇದು ವಿರುದ್ಧವಾಗಿ ನಡೆಯಬಹುದು.

ಪ್ರವಾದಿ (ﷺ) ರವರು ಹೇಳಿದರು:

«كُلُّ مَوْلُـــودٍ يُولَدُ عَلَى الْفِطْـــرَةِ. فَأَبَوَاهُ

يُهَوِّدَانِـــهِ وَيُنَصِّرَانِهِ وَيُمَجِّسَـــانِهِ، كَمَا تَنْتُـــجُ الْبَهِيمَـــةُ بَهِيمَةً جَمْعَـــاءَ، إِلَّا أَنْ تَكُونُوا أَنْتُـــمُ الَّذِيـــنَ تَجْدَعُونَهَا. هَلْ تُحِسُّـــونَ فِيهَا مِـــنْ جَدْعَاءَ».

“ಪ್ರತಿಯೊಂದು ಮಗುವೂ ಸಹಜ ಮನೋ-ಧರ್ಮದಲ್ಲಿ (ಇಸ್ಲಾಂ ಧರ್ಮದಲ್ಲಿ) ಹುಟ್ಟುತ್ತದೆ. ಆದರೆ ಅದರ ತಂದೆತಾಯಿಗಳು ಅದನ್ನು ಯಹೂದಿ, ಕ್ರೈಸ್ತ ಅಥವಾ ಅಗ್ನಿ ಪೂಜಕನನ್ನಾಗಿ ಮಾಡುತ್ತಾರೆ; ಜಾನುವಾರುಗಳು ಪೂರ್ಣ ರೂಪದ ಮರಿಗೆ ಜನ್ಮ ನೀಡುವಂತೆ. ನೀವು ಅವುಗಳಿಗೆ ವಿರೂಪ ಮಾಡದಿದ್ದರೆ. ಅವುಗಳಲ್ಲಿ ಏನಾದರೂ ವಿರೂಪವನ್ನು ನೀವು ಕಾಣುತ್ತೀರಾ?” [ಬುಖಾರಿ ಮುಸ್ಲಿಂ]

ಪ್ರವಾದಿ(ﷺ) ರವರು ನಮ್ಮ ನಿಜ ಜೀವನದಿಂದ ನಮಗೆ ಅರ್ಥವಾಗುವ ಒಂದು ಉದಾಹರಣೆಯ-ನ್ನು ತೋರಿಸುತ್ತಾ ಹೇಳುತ್ತಾರೆ:

«كُلُّ مَوْلُودٍ يُولَدُ عَلَى الْفِطْرَةِ».

“ಪ್ರತಿಯೊಂದು ಮಗುವೂ ಸಹಜ ಮನೋಧರ್ಮದಲ್ಲಿ ಜನ್ಮ ತಾಳುತ್ತದೆ.” ಅಂದರೆ, ಸಹಜ ಮನೋಧರ್ಮ (ಫಿತ್ರತ್) ಎಂದರೆ ಇಸ್ಲಾಂ ಧರ್ಮ.

﴿فِطۡرَتَ ٱللَّهِ ٱلَّتِي فَطَرَ ٱلنَّاسَ عَلَيۡهَاۚ لَا تَبۡدِيلَ لِخَلۡقِ ٱللَّهِۚ ذَٰلِكَ ٱلدِّينُ ٱلۡقَيِّمُ وَلَٰكِنَّ أَكۡثَرَ ٱلنَّاسِ لَا يَعۡلَمُونَ ٣٠﴾

“ಅಲ್ಲಾಹು ಮನುಷ್ಯರನ್ನು ಸೃಷ್ಟಿಸಿದ ಅವನ ಸಹಜ ಮನೋಧರ್ಮ. ಅಲ್ಲಾಹನ ಸೃಷ್ಟಿಯನ್ನು ಬದಲಾಯಿಸಬೇಡಿ. ಅದೇ ನೇರವಾದ ಧರ್ಮ. ಆದರೆ ಹೆಚ್ಚಿನ ಜನರಿಗೆ ಅದರ ಬಗ್ಗೆ ತಿಳುವಳಿಕೆಯಿಲ್ಲ.” [ಸೂರ ರೂಮ್ 30:30]

ಆದ್ದರಿಂದ ಪ್ರತಿಯೊಂದು ಮಗುವೂ ಸಹಜ ಮನೋಧರ್ಮದಲ್ಲಿ ಹುಟ್ಟುತ್ತದೆ. ಮಕ್ಕಳನ್ನು ಅದರಿಂದ ತಪ್ಪಿಸಿದರೆ ಅವರು ಯಹೂದಿ, ಕ್ರೈಸ್ತ, ಅಗ್ನಿ ಪೂಜಕ ಅಥವಾ ದುಷ್ಟ ಅಪರಾಧಿಗಳಾಗುತ್ತಾರೆ. ಇದು ಹೆಚ್ಚಾಗಿ ತಂದೆಯ

ನಿರ್ಲಕ್ಷ್ಯದಿಂದಲೇ ಸಂಭವಿಸುತ್ತದೆ. ಅಥವಾ ತಂದೆ ಮಕ್ಕಳಿಗೆ ಕೆಟ್ಟ ಮಾದರಿಯಾಗಿರುವುದರಿಂದಲೇ ಸಂಭವಿಸುತ್ತದೆ. (ಅಲ್ಲಾಹು ಕಾಪಾಡಲಿ).

«كُلُّ مَوْلُــــودٍ يُولَدُ عَلَى الْفِطْــــرَةِ. فَأَبَوَاهُ يُهَوِّدَانِهِ وَيُنَصِّرَانِهِ وَيُمَجِّسَــــانِهِ».

“ಪ್ರತಿಯೊಂದು ಮಗುವೂ ಸಹಜ ಮನೋ-ಧರ್ಮದಲ್ಲಿ (ಇಸ್ಲಾಂ ಧರ್ಮದಲ್ಲಿ) ಹುಟ್ಟುತ್ತದೆ. ಆದರೆ ಅದರ ತಂದೆತಾಯಿಗಳು ಅದನ್ನು ಯಹೂದಿ, ಕ್ರೈಸ್ತ ಅಥವಾ ಅಗ್ನಿ ಪೂಜಕನನ್ನಾಗಿ ಮಾಡುತ್ತಾರೆ.”

ನಂತರ ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾ ಪ್ರವಾದಿ(ﷺ) ರವರು ಹೇಳುತ್ತಾರೆ:

كَمَا تَنْتُجُ الْبَهِيمَةُ بَهِيمَةً جَمْعَاءَ».

“ಜಾನುವಾರುಗಳು ಪೂರ್ಣ ರೂಪದ ಮರಿಗೆ ಜನ್ಮ ನೀಡುವಂತೆ.”

ಒಂದು ಮರಿ ಯಾವಾಗಲೂ ತನ್ನ ಅಂಗಗಳನ್ನು

ಪರಿಪೂರ್ಣವಾಗಿ ಮತ್ತು ದೋಷಗಳಿಂದ ಮುಕ್ತವಾಗಿ ಸಂಪೂರ್ಣ ರೂಪುಗೊಂಡ ಸ್ಥಿತಿಯಲ್ಲಿ ಹುಟ್ಟುತ್ತದೆ. ಅದರ ಯಾವುದೇ ಭಾಗಗಳು ಕತ್ತರಿಸಲಾಗಿರುವುದಿಲ್ಲ ಅಥವಾ ದೋಷಯುಕ್ತವಾಗಿರುವುದಿಲ್ಲ, ನಮಗೆಲ್ಲರಿಗೂ ತಿಳಿದಿರುವಂತೆ ಅದು ಪೂರ್ಣ ರೂಪದಲ್ಲಿ ಜನಿಸುತ್ತದೆ.

ನಂತರ ಪ್ರವಾದಿ (ﷺ) ರವರು ಹೇಳುತ್ತಾರೆ:

«هَلْ تُحِسُّونَ فِيهَا مِنْ جَدْعَاءَ».

“ಅವುಗಳಲ್ಲಿ ಏನಾದರೂ ವಿರೂಪವನ್ನು ನೀವು ಕಾಣುತ್ತೀರಾ?”

ಅಂದರೆ, ಅಂಗ ವಿಚ್ಛೇದನಗೊಂಡ ರೂಪದಲ್ಲಿ ಹುಟ್ಟಿದ ಯಾವುದಾದರೂ ಮರಿಯನ್ನು ನೀವು ಎಂದಾದರೂ ನೋಡಿದ್ದೀರಾ? ಖಂಡಿತ ಇಲ್ಲ.

«إِلَّا أَنْ تَكُونُوا أَنْتُمُ الَّذِينَ تَجْدَعُونَهَا».

“ನೀವು ಅವುಗಳಿಗೆ ವಿರೂಪ ಮಾಡದಿದ್ದರೆ.”

[ಸಹೀಹ್ ಮುಸ್ಲಿಂ 2658]

ಕೈ, ಮೂಗು ಅಥವಾ ಕಿವಿ ವಿರೂಪಗೊಂಡಿರುವ ಅಥವಾ ಕಿವಿ ಮುರಿದಿರುವ ಪ್ರಾಣಿಯನ್ನು ನೀವು ಕಂಡರೆ; ಇದಕ್ಕೆ ಅದರ ಯಜಮಾನನೇ ಕಾರಣ. ಅವನ ನಿರ್ಲಕ್ಷ್ಯದಿಂದ ಹಾಗೆ ಸಂಭವಿಸಿದೆ, ಅಥವಾ ಅವನು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದ್ದಾನೆ. ಇದೇ ರೀತಿ, ಮಕ್ಕಳು ಸಹಜ ಮನೋಧರ್ಮದಲ್ಲಿ ಹುಟ್ಟುತ್ತಾರೆ. ಅಂದರೆ ಇಸ್ಲಾಂ ಧರ್ಮದಲ್ಲಿ ಹುಟ್ಟುತ್ತಾರೆ. ಮಕ್ಕಳು ಸುಳ್ಳು ಹೇಳುವುದು, ಮೋಸ ಮಾಡುವುದು, ಅಥವಾ ದಾರಿತಪ್ಪಿ ದುಷ್ಟನಾಗುವುದು, ಅಥವಾ ನಮಾಝ್ ಮಾಡದಿರುವುದು ಅಥವಾ ನಮಾಝನ್ನು ಮಾಡುವುದನ್ನೇ ತೊರೆದು ಬಿಡುವುದು, ಇವುಗಳಿಗೆ ಮಕ್ಕಳ ಸಹಜ ಮನೋಧರ್ಮ ಕಾರಣವಲ್ಲ. ಬದಲಾಗಿ, ಅವರನ್ನು ನೀವು ಬೆಳೆಸಿದ ರೀತಿಯೇ ಅದಕ್ಕೆ ಕಾರಣ.

ಮಕ್ಕಳು ದುಷ್ಟತನ ಬೆಳೆಸಿಕೊಳ್ಳಲು ಕಾರಣ ಅವರು ಬೆಳೆದ ರೀತಿಯಾಗಿದೆ. ಒಂದೋ ಪೋಷಕರು ಮಕ್ಕಳನ್ನು ಸರಿಯಾದ ರೀತಿಯಲ್ಲಿ

ಬೆಳೆಸಿಲ್ಲ; ಅಥವಾ ಮಕ್ಕಳು ಬೀದಿಯಿಂದ ಪ್ರಭಾವಿತರಾಗಿದ್ದಾರೆ. ಬೀದಿಗಳಲ್ಲಿನ ಪ್ರಭಾವವು ಮನೆಯೊಳಗಿನ ಪ್ರಭಾವಕ್ಕಿಂತ ಹೆಚ್ಚು ಪ್ರಬಲವಾಗಿದೆ. ಕೆಲವೊಮ್ಮೆ ಮಕ್ಕಳು ದೇವಭಕ್ತರು ಮತ್ತು ಧರ್ಮನಿಷ್ಠರಾಗಿದ್ದು, ನಂತರ ದುಷ್ಟರಾಗಿ ಮಾರ್ಪಡುತ್ತಾರೆ. ಇದಕ್ಕೆ ಕಾರಣವೇನು? ಅವರು ಇದನ್ನು ಎಲ್ಲಿಂದ ಕಲಿತರು? ಸಂಶಯವಿಲ್ಲ; ಅವರು ಬೀದಿಯಿಂದಲೇ ಕಲಿತುಕೊಂಡಿದ್ದಾರೆ.

« ವಿಷಯಸೂಚಿ

# ನರಕಾಗ್ನಿಯಿಂದ ಮಕ್ಕಳನ್ನು ರಕ್ಷಿಸುವ ಹೊಣೆಗಾರಿಕೆ

ಓ ಸಹೋದರರೇ! ನಾವು ಈ ಹೊಣೆಗಾರಿಕೆಯನ್ನು ನಿರ್ವಹಿಸುವುದು, ಮಕ್ಕಳ ಆರೈಕೆ ಮಾಡುವುದು ಮತ್ತು ಅವರ ಅಗತ್ಯಗಳನ್ನು ಪೂರೈಸುವುದು ಕಡ್ಡಾಯವಾಗಿದೆ.

ಅಲ್ಲಾಹು ಹೇಳುತ್ತಾನೆ:

﴿يَٰٓأَيُّهَا ٱلَّذِينَ ءَامَنُواْ قُوٓاْ أَنفُسَكُمۡ وَأَهۡلِيكُمۡ
نَارٗا وَقُودُهَا ٱلنَّاسُ وَٱلۡحِجَارَةُ عَلَيۡهَا
مَلَٰٓئِكَةٌ غِلَاظٞ شِدَادٞ لَّا يَعۡصُونَ ٱللَّهَ
مَآ أَمَرَهُمۡ وَيَفۡعَلُونَ مَا يُؤۡمَرُونَ ٦﴾

"ಓ ಸತ್ಯವಿಶ್ವಾಸಿಗಳೇ! ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ನರಕಾಗ್ನಿಯಿಂದ ರಕ್ಷಿಸಿರಿ. ಅದರ ಇಂಧನವು ಮನುಷ್ಯರು ಮತ್ತು ಕಲ್ಲುಗಳಾಗಿವೆ. ಅದರ ಮೇಲೆ ಬಲಿಷ್ಠರು ಮತ್ತು ಕಠೋರ ಹೃದಯಿಗಳಾದ ದೇವದೂತರಿದ್ದಾರೆ.

ಅಲ್ಲಾಹನ ಯಾವುದೇ ಆಜ್ಞೆಯನ್ನೂ ಅವರು ಅನುಸರಿಸದೇ ಇರುವುದಿಲ್ಲ. ಅವರಿಗೆ ಆಜ್ಞಾಪಿ-ಸಿದಂತೆಯೇ ಅವರು ಕಾರ್ಯನಿರ್ವಹಿಸುತ್ತಾರೆ.” [ಸೂರ ತಹ್ರೀಮ್ 66:6]

﴿قُوٓاْ أَنفُسَكُمۡ وَأَهۡلِيكُمۡ نَارٗا﴾

“ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ನರಕಾಗ್ನಿಯಿಂದ ರಕ್ಷಿಸಿರಿ.”

ಇದು ಪ್ರತಿಯೊಬ್ಬ ಮುಸ್ಲಿಮನಿಗೂ ಕಡ್ಡಾಯವಾಗಿದೆ. ಅಂದರೆ, ಪ್ರತಿಯೊಬ್ಬರೂ ತಮ್ಮನ್ನು ಮತ್ತು ತಮ್ಮ ಕುಟುಂಬವನ್ನು (ಇದರಲ್ಲಿ ಅವರ ಹೆಂಡತಿಯರು, ಮಕ್ಕಳು ಮತ್ತು ಅವರ ಆರೈಕೆ ಮತ್ತು ಪೋಷಣೆಯಲ್ಲಿರುವ ಎಲ್ಲರೂ ಒಳಪಡುತ್ತಾರೆ) ನರಕಾಗ್ನಿಯಿಂದ ರಕ್ಷಿಸಬೇಕು. ನರಕಾಗ್ನಿಯು ಹೇಗಿದೆಯೆಂದರೆ,

﴿وَقُودُهَا ٱلنَّاسُ وَٱلۡحِجَارَةُ﴾

“ಅದರ ಇಂಧನವು ಮನುಷ್ಯರು ಮತ್ತು

ಕಲ್ಲುಗಳಾಗಿವೆ.” (ಅಲ್ಲಾಹು ಕಾಪಾಡಲಿ)

﴿عَلَيۡهَا مَلَٰٓئِكَةٌ غِلَاظٞ شِدَادٞ لَّا يَعۡصُونَ ٱللَّهَ مَآ أَمَرَهُمۡ وَيَفۡعَلُونَ مَا يُؤۡمَرُونَ ٦﴾

“ಅದರ ಮೇಲೆ ಬಲಿಷ್ಠರು ಮತ್ತು ಕಠೋರ ಹೃದಯಿಗಳಾದ ದೇವದೂತರಿದ್ದಾರೆ. ಅಲ್ಲಾಹನ ಯಾವುದೇ ಆಜ್ಞೆಯನ್ನೂ ಅವರು ಅನುಸರಿಸದೇ ಇರುವುದಿಲ್ಲ. ಅವರಿಗೆ ಆಜ್ಞಾಪಿಸಿದಂತೆಯೇ ಅವರು ಕಾರ್ಯನಿರ್ವಹಿಸುತ್ತಾರೆ.” [ಸೂರ ತಹ್ರೀಮ್ 66:6]

ನಮ್ಮನ್ನು ನಾವು ನರಕಾಗ್ನಿಯಿಂದ ರಕ್ಷಿಸುವುದು ಹೇಗೆ? ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಅವನಿಗೆ ವಿಧೇಯರಾಗುವ ಮತ್ತು ಅವನ ನಿಯಮಗಳಿಗೆ ಶರಣಾಗುವ ಮೂಲಕ ನಮ್ಮನ್ನು ನಾವು ನರಕಾಗ್ನಿಯಿಂದ ರಕ್ಷಿಸಬೇಕು.

“ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ನರಕಾಗ್ನಿಯಿಂದ ರಕ್ಷಿಸಿರಿ” ಎಂಬ ವಚನವನ್ನು

ವಿವರಿಸುತ್ತಾ ಪ್ರಸಿದ್ಧ ಸಹಾಬಿ ಅಲಿ ಬಿನ್ ಅಬೂತಾಲಿಬ್ (ﷺ) ಹೇಳುತ್ತಾರೆ:

أَدِّبُوهُمْ وَعَلِّمُوهُمْ.

"ಅವರಿಗೆ ಶಿಸ್ತು ಕಲಿಸಿ ಮತ್ತು ಶಿಕ್ಷಣ ನೀಡಿ."

ಇದು ಅವರನ್ನು ನರಕಾಗ್ನಿಯಿಂದ ರಕ್ಷಿಸುವ ಒಂದು ವಿಧಾನವಾಗಿದೆ. ಹಸನ್ ಬಸ್ರಿ (ﷺ) ಇದೇ ವಚನವನ್ನು ವಿವರಿಸುತ್ತಾ ಹೇಳುತ್ತಾರೆ:

مُرُوهُمْ بِالْفَرَائِضِ وَعَلِّمُوهُمُ الْخَيْرَ.

"ಅವರಿಗೆ ಕಡ್ಡಾಯ ಕಾರ್ಯಗಳನ್ನು ನಿರ್ವಹಿಸಲು ಆಜ್ಞಾಪಿಸಿ ಮತ್ತು ಅವರಿಗೆ ಒಳಿತುಗಳನ್ನು ಕಲಿಸಿಕೊಡಿ."

ಎರಡು ಪ್ರಮುಖ ಮತ್ತು ಗಂಭೀರ ವಿಷಯಗಳನ್ನು ನೆರವೇರಿಸುವ ಮೂಲಕ ಮಕ್ಕಳನ್ನು ನರಾಗ್ನಿಯಿಂದ ರಕ್ಷಿಸಬಹುದು. ಶಿಸ್ತು ಮತ್ತು ಶಿಕ್ಷಣ.

ವಿಷಯಸೂಚಿ

# ಮಕ್ಕಳಿಗೆ ಶಿಸ್ತು ಕಲಿಸುವುದು ಮತ್ತು ಶಿಕ್ಷಣ ನೀಡುವುದು

## 1. ಮಕ್ಕಳಿಗೆ ಶಿಸ್ತು ಕಲಿಸುವುದು

ಮಕ್ಕಳು ಉತ್ತಮ ನಡವಳಿಕೆ, ಉತ್ತಮ ಗುಣ ಮತ್ತು ಪ್ರಶಂಸನೀಯ ಶಿಷ್ಟಾಚಾರವನ್ನು ಅಳವಡಿಸಿಕೊಳ್ಳುವಂತೆ ಮತ್ತು ಅಲ್ಲಾಹನ ಆಜ್ಞೆಗಳಿಗೆ ವಿಧೇಯರಾಗಿರುವಂತೆ ಅವರನ್ನು ಬೆಳೆಸಿ. ಮಕ್ಕಳು ದೇವಭಕ್ತಿ, ಸತ್ಯಸಂಧತೆ, ಕುಟುಂಬ ಸಂಬಂಧಗಳ ಬಗ್ಗೆ ಕಾಳಜಿ ವಹಿಸುವುದು, ಮಾತು ಕೊಟ್ಟರೆ ಪಾಲಿಸುವುದು, ನಂಬಿಕೆ ಇಟ್ಟರೆ ದ್ರೋಹ ಮಾಡದಿರುವುದು ಮುಂತಾದ ಉತ್ತಮ ಮತ್ತು ಉದಾತ್ತ ಗುಣಗಳನ್ನು ಮೈಗೂಡಿಸಿಕೊಳ್ಳುವಂತೆ ನೋಡಿಕೊಳ್ಳಿ. ದಬ್ಬಾಳಿಕೆ, ಅಸಭ್ಯ ಮಾತು, ನಿಂದನೆ, ಸುಳ್ಳು ಹೇಳುವುದು, ತಮಾಷೆ ಮಾಡುವುದು, ಹಂಗಿಸುವುದು, ಚಾಡಿ, ಪರದೂಷಣೆ ಮುಂತಾದ ಕೆಟ್ಟ ಗುಣಗಳಿಂದ ಅವರನ್ನು ದೂರವಿಡಿ. ಈ ಎಲ್ಲಾ ಕೆಟ್ಟ ಗುಣಗಳು ನಿಮ್ಮ ಮಕ್ಕಳನ್ನು ಸೋಕದಂತೆ ಅತಿಯಾಗಿ ಜಾಗರೂಕತೆ ವಹಿಸಿ.

## 2. ಮಕ್ಕಳಿಗೆ ಶಿಕ್ಷಣ ನೀಡುವುದು

ನಿಮ್ಮ ಮಕ್ಕಳಿಗೆ ಪ್ರಯೋಜನ ನೀಡುವ ಒಳ್ಳೆಯ ಶಿಕ್ಷಣವನ್ನು ನೀಡಿ. ಅವರಿಗೆ ಧಾರ್ಮಿಕ ನಿಯಮಗಳು ಮತ್ತು ಆಚಾರಗಳನ್ನು ಕಲಿಸಿಕೊಡಿ. ಸುನ್ನತ್‌ಗಳನ್ನು ಮತ್ತು ಅಪೇಕ್ಷಣೀಯ ಕಾರ್ಯಗಳನ್ನು ಕಲಿಸಿಕೊಡಿ. ನಿಮಗೆ ಧರ್ಮದ ಬಗ್ಗೆ ಹೆಚ್ಚಿನ ಜ್ಞಾನವಿಲ್ಲದಿದ್ದರೆ ವಿದ್ವಾಂಸರ ಮೂಲಕ ಅವರಿಗೆ ನಿಯಮಿತವಾಗಿ ಪಾಠಗಳನ್ನು ಮಾಡಿಸಿ. ವಿದ್ವಾಂಸರು ಅವರಿಗೆ ಧಾರ್ಮಿಕ ಜ್ಞಾನವನ್ನು ಕಲಿಸುತ್ತಾರೆ ಮತ್ತು ಅವರನ್ನು ಉತ್ತಮ ವಾತಾವರಣದಲ್ಲಿ ಅತ್ಯುತ್ತಮ ನಡವಳಿಕೆಯೊಂದಿಗೆ ಬೆಳೆಸುತ್ತಾರೆ.

ಶಿಕ್ಷಣ ನೀಡುವುದು ಮತ್ತು ಶಿಸ್ತು ಕಲಿಸುವುದು ಮಕ್ಕಳನ್ನು ನರಕಾಗ್ನಿಯಿಂದ ರಕ್ಷಿಸುವ ಎರಡು ಪ್ರಮುಖ ವಿಷಯಗಳಾಗಿವೆ. ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಅಲ್ಲಾಹನ ಬಗ್ಗೆ ಪಾಠ ಮಾಡಬೇಕೆಂದು ವಿದ್ವಾಂಸರು ಹೇಳುತ್ತಾರೆ. ನೀವು ಮಕ್ಕಳಿಗೆ ಕಲಿಸಿಕೊಡುವ ಮೊಟ್ಟಮೊದಲ ಮಾತು “ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್”

(ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾಗಿ ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್ (ﷺ) ಅಲ್ಲಾಹನ ಸಂದೇಶವಾಹಕರು) ಆಗಿರಬೇಕು. ಮಕ್ಕಳಿಗೆ ಬಾಲ್ಯದಲ್ಲೇ "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್" ಎಂದು ಹೇಳಲು ಕಲಿಸಿ. ಮಕ್ಕಳು ಮಾತು ಕಲಿಯುವಾಗಲೇ ಅವರು ಈ ವಚನವನ್ನು ಪಠಿಸಲು ರೂಢಿ ಮಾಡಿಸಿ. ತೋರುಬೆರಳಿನಿಂದ ಒಂದು ಎಂದು ತೋರಿಸುತ್ತಾ "ಲಾ ಇಲಾಹ ಇಲ್ಲಲ್ಲಾಹ್" ಎಂದು ಹೇಳಲು ಅವರನ್ನು ಹುರಿದುಂಬಿಸಿ. ಹೀಗೆ ಮಕ್ಕಳು ದೊಡ್ಡವರಾಗುತ್ತಾ ಏಕೈಕ ಅಲ್ಲಾಹನ ಆರಾಧನೆಯಲ್ಲಿ ಬೆಳೆಯುತ್ತಾರೆ. ಮಕ್ಕಳು ಚಿಕ್ಕಂದಿನಲ್ಲಿ ಅವರಿಗೆ ಅರ್ಥವಾಗುವ ರೀತಿಯಲ್ಲಿ "ಲಾ ಇಲಾಹ ಇಲ್ಲಲ್ಲಾಹ್" ದ ಅರ್ಥವನ್ನು ಕಲಿಸಿಕೊಡಿ.

ಮಕ್ಕಳು ಮಾತನಾಡಲು ಕಲಿತ ನಂತರ ಅಲ್ಲಾಹನನ್ನು ಭಯಪಡಬೇಕೆಂದು ಅವರಿಗೆ ತಿಳಿಸಿ. "ಅಲ್ಲಾಹು ನಮ್ಮನ್ನು ಸೃಷ್ಟಿಸಿದನು ಮತ್ತು ನಮ್ಮನ್ನು ಅಸ್ತಿತ್ವಕ್ಕೆ ತಂದನು. ಅವನು ನಮ್ಮ ಸೃಷ್ಟಿಕರ್ತನು. ಅವನಲ್ಲದೆ ಬೇರೆ ಸೃಷ್ಟಿಕರ್ತರಿಲ್ಲ. ನಮ್ಮಲ್ಲಿ ಏನೆಲ್ಲಾ ಅನುಗ್ರಹಗಳಿವೆಯೋ

ಅವೆಲ್ಲವೂ ಅವನೇ ನಮಗೆ ದಯಪಾಲಿಸಿದ್ದು" ಎಂದು ಅವರಿಗೆ ಕಲಿಸಿಕೊಡಿ. ನಂತರ ಅವರಿಗೆ, "ಅಲ್ಲಾಹು ನಮ್ಮನ್ನು ಅವನ ಆರಾಧನೆಗಾಗಿ, ಅವನನ್ನು ಮಾತ್ರ ಆರಾಧಿಸಲು, ಅವನಿಗೆ ವಿಧೇಯರಾಗಲು ಮತ್ತು ಅವನ ಆಜ್ಞೆಗಳನ್ನು ಪಾಲಿಸಲು ಸೃಷ್ಟಿಸಿದ್ದಾನೆ" ಎಂದು ಹೇಳಿಕೊಡಿ.

﴿وَمَا خَلَقْتُ ٱلْجِنَّ وَٱلْإِنسَ
إِلَّا لِيَعْبُدُونِ ٥٦﴾

"ನನ್ನನ್ನು ಆರಾಧಿಸುವುದಕ್ಕಾಗಿ ಅಲ್ಲದೆ ನಾನು ಜಿನ್ನ್‌ಗಳನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿಲ್ಲ." [ಸೂರ ದಾರಿಯಾತ್ 51:56]

ಅದೇ ರೀತಿ, ಅಲ್ಲಾಹು ಏಳಾಕಾಶಗಳ ಮೇಲೆ ಅವನ ಸಿಂಹಾಸನದಲ್ಲಿದ್ದಾನೆ, ಅವನು ನಮ್ಮ ಬಗ್ಗೆ ಎಲ್ಲವನ್ನು ತಿಳಿದಿದ್ದಾನೆ ಮತ್ತು ಅವನಿಗೆ ಕಾಣದಂತೆ ಏನೂ ಮಾಡಲು ನಮಗೆ ಸಾಧ್ಯವಿಲ್ಲ ಎಂದು ಕಲಿಸಿಕೊಡಿ. ನೀವೆಲ್ಲೇ ಇದ್ದರೂ ಅಲ್ಲಾಹು ನಿಮ್ಮನ್ನು ನೋಡುತ್ತಾನೆ, ನಿಮ್ಮ ಮಾತುಗಳನ್ನು ಕೇಳುತ್ತಾನೆ ಮತ್ತು ನಿಮ್ಮ ಸ್ಥಿತಿಯನ್ನು

ತಿಳಿಯುತ್ತಾನೆ; ನೀವು ಮಾಡುವ ಯಾವುದೇ ಕೆಲಸವು ಅವನಿಗೆ ಕಾಣದೆ ಇರುವುದಿಲ್ಲ; ಅವನು ನಿಮ್ಮನ್ನು ಸದಾ ನೋಡುತ್ತಾನೆ ಮತ್ತು ನಿಮ್ಮ ಬಗ್ಗೆ ತಿಳಿಯುತ್ತಾನೆ; ಯಾವುದೇ ವಿಷಯವನ್ನೂ ಅವನಿಂದ ಅಡಗಿಸಲು ಸಾಧ್ಯವಿಲ್ಲ" ಎಂದು ಮಕ್ಕಳಿಗೆ ಕಲಿಸಿಕೊಡಿ. ಅದೇ ರೀತಿ, ಮಕ್ಕಳಿಗೆ ತಕ್ವಾ (ದೇವಭಯ) ವನ್ನು ಕಲಿಸಿಕೊಡಿ. "ಅಲ್ಲಾಹನಿಗೆ ವಿಧೇಯರಾಗಿರಿ ಮತ್ತು ಅವನನ್ನು ಭಯಪಡಿರಿ" ಎಂದು ಮಕ್ಕಳೊಡನೆ ಸೌಮ್ಯವಾಗಿ ಹೇಳಿರಿ. ಮಕ್ಕಳನ್ನು ಚಿಕ್ಕ ಪ್ರಾಯದಲ್ಲೇ ಈ ಎಲ್ಲಾ ವಿಷಯಗಳನ್ನು ಕಲಿತು ಬೆಳೆಯುವಂತೆ ನೋಡಿಕೊಳ್ಳಿ, ನಂತರ ಅವರಿಗೆ ನಮಾಝ್ ಮಾಡುವುದನ್ನು ಕಲಿಸಿಕೊಡಿ.

ಪ್ರವಾದಿ(ﷺ) ರವರು ಹೇಳಿದರು:

«مُرُوا أَبْنَاءَكُمْ بِالصَّلَاةِ لِسَبْعِ سِنِينَ، وَاضْرِبُوهُمْ عَلَيْهَا لِعَشْرِ سِنِينَ، وَفَرِّقُوا بَيْنَهُمْ فِي الْمَضَاجِعِ».

"ನಿಮ್ಮ ಮಕ್ಕಳಿಗೆ ಏಳು ವರ್ಷ ಪ್ರಾಯವಾದಾಗ

ಅವರಿಗೆ ನಮಾಝ್ ಮಾಡಲು ಕಲಿಸಿರಿ; ಹತ್ತು ವರ್ಷವಾದರೂ ಅವರು ನಮಾಝ್ ಮಾಡದಿದ್ದರೆ ಅವರಿಗೆ ಹೊಡೆಯಿರಿ; ಮತ್ತು ಹಾಸಿಗೆಗಳಲ್ಲಿ ಅವರನ್ನು ಬೇರೆ ಬೇರೆಯಾಗಿ ಮಲಗಿಸಿ." [ಅಬೂದಾವೂದ್ ಮತ್ತು ತಿರ್ಮಿದಿ]

ನಾವು ಮಕ್ಕಳೊಂದಿಗೆ ವ್ಯವಹರಿಸಬೇಕಾದ ಮೂರು ವಿಷಯಗಳನ್ನು ಈ ಹದೀಸ್ ಒಳಗೊಂಡಿದೆ:

### 1. ಮಕ್ಕಳಿಗೆ ಏಳು ವರ್ಷವಾದಾಗ ನಮಾಝ್ ಮಾಡಲು ಅಜ್ಞಾಪಿಸುವುದು.

ಅಲ್ಲಾಹು ಹೇಳುತ್ತಾನೆ:

﴿ وَأۡمُرۡ أَهۡلَكَ بِٱلصَّلَوٰةِ وَٱصۡطَبِرۡ
عَلَيۡهَاۖ لَا نَسۡـَٔلُكَ رِزۡقٗاۖ نَّحۡنُ نَرۡزُقُكَۗ
وَٱلۡعَٰقِبَةُ لِلتَّقۡوَىٰ ١٣٢ ﴾

“ನಿಮ್ಮ ಕುಟುಂಬಕ್ಕೆ ನಮಾಝ್ ಮಾಡಲು ಆಜ್ಞಾಪಿಸಿ, ಮತ್ತು ಅದರಲ್ಲಿ ತಾಳ್ಮೆಯಿಂದಿರಿ. ನಾವು ನಿಮ್ಮೊಂದಿಗೆ ಜೀವನೋಪಾಯವನ್ನು ಕೇಳುವುದಿಲ್ಲ. ಬದಲಿಗೆ, ನಾವೇ ನಿಮಗೆ ಜೀವನೋಪಾಯವನ್ನು ನೀಡುತ್ತೇವೆ. ಉತ್ತಮ ಅಂತ್ಯವಿರುವುದು ದೇವಭಯವುಳ್ಳವರಿಗೆ.” [ಸೂರ ತಾಹಾ 20:132]

ಮಕ್ಕಳಿಗೆ ನಮಾಝ್ ಮಾಡಲು ಆಜ್ಞಾಪಿಸುವಾಗ ತಾಳ್ಮೆ ಮತ್ತು ಸಹಿಷ್ಣುತೆಯ ಅಗತ್ಯವಿದೆ. ಅವರಿಗೆ ಕಿರಿಕಿರಿಯಾಗುವಂತೆ ಅಥವಾ ಚಿಟ್ಟು ಹಿಡಿಯುವಂತೆ ಅವರೊಂದಿಗೆ ವರ್ತಿಸಬೇಡಿ. ಬದಲಿಗೆ ಈ ವಿಷಯದಲ್ಲಿ ತಾಳ್ಮೆಯಿಂದ ವರ್ತಿಸಿ. ನಯವಾಗಿ ಅವರೊಡನೆ ಮಾತನಾಡಿ. ಕೆಲವು ತಂದೆಯರು ಬಹುಶಃ ಮಕ್ಕಳಿಗೆ ಒಮ್ಮೆ, ಎರಡು ಬಾರಿ, ಮೂರು ಬಾರಿ ನಮಾಝ್ ಮಾಡಲು ಆದೇಶಿಸುತ್ತಾರೆ. ಮಕ್ಕಳು ನಮಾಝ್ ಮಾಡಲು ಕೇಳದಿದ್ದರೆ ರೋಸಿ ಹೋಗಿ ಅವರನ್ನು ಅವರ ಪಾಡಿಗೆ ಬಿಟ್ಟುಬಿಡುತ್ತಾರೆ. ಕೆಲವು ತಂದೆಯರು ಕೋಪದಿಂದಲೇ ಹೇಳುತ್ತಾರೆ: “ಅಲ್ಲಾಹು ನಿನ್ನನ್ನು ನಮಾಝ್ ಮಾಡದಂತೆ ಮಾಡಿಬಿಡಲಿ!” (ಅಲ್ಲಾಹು ಕಾಪಾಡಲಿ). ಅವರು

ತಮ್ಮ ಮಕ್ಕಳ ವಿರುದ್ಧ ಪ್ರಾರ್ಥಿಸುತ್ತಾರೆ! ಅವರು ತಮ್ಮ ಮಕ್ಕಳಿಗೆ ಶಪಿಸುತ್ತಾರೆ! ಸಹೋದರರೇ, ಇದು ಗುರುತರವಾದ ತಪ್ಪು. ಈ ವಿಷಯದಲ್ಲಿ ಸಾಕಷ್ಟು ತಾಳ್ಮೆಯಿಂದಿರಬೇಕು. ಯಾವತ್ತೂ ಮಕ್ಕಳ ವಿರುದ್ಧ ಪ್ರಾರ್ಥಿಸಬಾರದು.

ಅಲ್ಲಾಹು ಹೇಳುತ್ತಾನೆ:

﴿وَيَدۡعُ ٱلۡإِنسَٰنُ بِٱلشَّرِّ دُعَآءَهُۥ
بِٱلۡخَيۡرِۖ وَكَانَ ٱلۡإِنسَٰنُ عَجُولٗا ١١﴾

“ಮನುಷ್ಯನು ಒಳಿತಿಗಾಗಿ ಪ್ರಾರ್ಥಿಸುವಂತೆ ಕೆಡುಕಿಗಾಗಿಯೂ ಪ್ರಾರ್ಥಿಸುತ್ತಾನೆ. ಮನುಷ್ಯನು ಬಹಳ ಆತುರಪಡುವವನಾಗಿದ್ದಾನೆ.” [ಸೂರಾ ಇಸ್ರಾ 17:11]

ಆತುರಪಡಬೇಡಿ. ಸಾವಧಾನತೆಯಿಂದ ವಿವೇಕದಿಂದ ವರ್ತಿಸಿ. ಆತುರವು ಶೈತಾನನಿಂದಾಗಿದೆ ಮತ್ತು ಸಾವಧಾನತೆಯು ಅಲ್ಲಾಹನಿಂದಾಗಿದೆ. ಆತುರ ಪಡಬೇಡಿ, ಬದಲಾಗಿ ಸಾವಧಾನತೆ ಮತ್ತು ತಾಳ್ಮೆಯಿಂದಿರಿ.

ಸ್ವಲ್ಪ ಸಮಯ ತೆಗೆದುಕೊಳ್ಳಿ. ಮಕ್ಕಳು ಒಮ್ಮೆಲೇ ಪರಿವರ್ತನೆಯಾಗುವುದಿಲ್ಲ. ಸಾವಕಾಶವಾಗಿ ಮಕ್ಕಳಿಗೆ ಬೋಧಿಸುತ್ತಿರಿ. ಮಕ್ಕಳ ವಿಷಯದಲ್ಲಿ ತಾಳ್ಮೆ ಮತ್ತು ಸಹಿಷ್ಣುತೆ ಬಹಳ ಅಗತ್ಯವಾಗಿದೆ. ಅವರೊಡನೆ ಅನುಕಂಪದಿಂದ ಸಹಾನುಭೂತಿಯಿಂದ ಸೌಮ್ಯವಾಗಿ ನಯವಾಗಿ ವರ್ತಿಸಿ.

ಅಲ್ಲಾಹು ಪ್ರವಾದಿ(ﷺ) ರೊಂದಿಗೆ ಹೇಳುತ್ತಾನೆ:

﴿ وَأۡمُرۡ أَهۡلَكَ بِٱلصَّلَوٰةِ وَٱصۡطَبِرۡ عَلَيۡهَاۖ ﴾

“ನಿಮ್ಮ ಕುಟುಂಬಕ್ಕೆ ನಮಾಝ್ ಮಾಡಲು ಆಜ್ಞಾಪಿಸಿ, ಮತ್ತು ಅದರಲ್ಲಿ ತಾಳ್ಮೆಯಿಂದಿರಿ.”

ಇದಕ್ಕೆ ತಾಳ್ಮೆಯ ಅಗತ್ಯವಿದೆ. ಅಸಹನೆ ಮತ್ತು ಕಿರಿಕಿರಿಯನ್ನು ತೊರೆಯಬೇಕಾಗುತ್ತದೆ. ನೀವು ಈ ವಿಷಯದಲ್ಲಿ ತಾಳ್ಮೆಯಿಂದಿರಬೇಕು!

ಅಲ್ಲಾಹು ಹೇಳುತ್ತಾನೆ:

﴿ وَٱذۡكُرۡ فِي ٱلۡكِتَٰبِ إِسۡمَٰعِيلَۚ إِنَّهُۥ

كَانَ صَادِقَ ٱلْوَعْدِ وَكَانَ رَسُولًا نَّبِيًّا ﴿٥٤﴾ وَكَانَ يَأْمُرُ أَهْلَهُۥ بِٱلصَّلَوٰةِ وَٱلزَّكَوٰةِ وَكَانَ عِندَ رَبِّهِۦ مَرْضِيًّا ﴿٥٥﴾

"ಮತ್ತು ಗ್ರಂಥದಲ್ಲಿ (ಕುರ್‌ಆನಿನಲ್ಲಿ) ಇಸ್ಮಾಯೀಲರನ್ನು ಸ್ಮರಿಸಿ. ನಿಶ್ಚಯವಾಗಿಯೂ! ಅವರು ಮಾತು ಕೊಟ್ಟರೆ ಪಾಲಿಸುತ್ತಿದ್ದರು. ಅವರೊಬ್ಬ ಸಂದೇಶವಾಹಕರು ಮತ್ತು ಪ್ರವಾದಿಯಾಗಿದ್ದರು. ಅವರು ತಮ್ಮ ಕುಟುಂಬಕ್ಕೆ ಮತ್ತು ತಮ್ಮ ಜನರಿಗೆ ನಮಾಝ್ ಮಾಡಲು, ಝಕಾತ್ ನೀಡಲು ಆದೇಶಿಸುತ್ತಿದ್ದರು. ಅವರ ಪರಿಪಾಲಕನು (ಅಲ್ಲಾಹು) ಅವರ ಬಗ್ಗೆ ಸಂಪ್ರೀತನಾಗಿದ್ದನು." [ಸೂರ ಮರ್ಯಮ್ 19:54-55]

﴿ وَكَانَ يَأْمُرُ أَهْلَهُۥ بِٱلصَّلَوٰةِ ﴾

"ಅವರು ತಮ್ಮ ಕುಟುಂಬಕ್ಕೆ ನಮಾಝ್ ಮಾಡಲು ಆದೇಶಿಸುತ್ತಿದ್ದರು."

ಇದು ಪ್ರವಾದಿಗಳ ನಡವಳಿಕೆ ಕ್ರಮದಲ್ಲಿ

ಒಂದಾಗಿದೆ. ಅವರು ತಮ್ಮ ಮಕ್ಕಳಿಗೆ ನಮಾಝ್ ಮಾಡಲು ಆದೇಶಿಸುತ್ತಿದ್ದರು ಮತ್ತು ಆ ವಿಷಯದಲ್ಲಿ ಅವರು ತಾಳ್ಮೆಯಿಂದಿದ್ದರು. ಅವರನ್ನು ಅನುಕರಿಸುವುದು ಮತ್ತು ಅವರ ಮಾದರಿಯನ್ನು ಹಾಗೂ ಅವರ ವಿಧಾನವನ್ನು ಸ್ವೀಕರಿಸುವುದು ಕಡ್ಡಾಯವಾಗಿದೆ. ಇದರಿಂದ ಪುನರುತ್ಥಾನ ದಿನದಂದು ನಮ್ಮನ್ನು ಅವರ ಜೊತೆಗೆ ಒಟ್ಟುಗೂಡಿಸಲಾಗುವುದು. ಸಹೋದರರರೇ! ಈ ವಿಷಯದಲ್ಲಿ — ಮಕ್ಕಳಿಗೆ ನಮಾಝ್ ಮಾಡಲು ಆಜ್ಞಾಪಿಸುವ ವಿಷಯದಲ್ಲಿ — ನಾವು ಹೇಳುವುದೇನೆಂದರೆ ಮಕ್ಕಳಿಗೆ ಏಳು ವರ್ಷ ಪ್ರಾಯವಾದರೆ ಅವರಿಗೆ ನಮಾಝ್ ಮಾಡಲು ಆದೇಶಿಸಿ. ಅವರೊಡನೆ, “ನಮಾಝ್ ಮಾಡಿ. ನಮಾಝ್ ಮಾಡುವುದು ಕಡ್ಡಾಯವಾಗಿದೆ. ನಮಾಝನ್ನು ತೊರೆಯುವುದು ಸತ್ಯನಿಷೇಧವಾಗಿದೆ” ಎಂದು ನಯವಾಗಿ ಹೇಳಿರಿ. ಮಕ್ಕಳಿಗೆ ಏಳು ವರ್ಷವಾದಾಗ ಅವರು ನಮಾಝ್ ಮಾಡುವುದನ್ನು ಕಲಿತು ನಮಾಝ್ ನಿರ್ವಹಿಸುವಂತೆ ನೋಡಿಕೊಳ್ಳಿ.

## 2. ಹತ್ತು ವರ್ಷವಾದರೂ ನಮಾಝ್ ಮಾಡದಿದ್ದರೆ ಹೊಡೆಯುವುದು

ಹತ್ತು ವರ್ಷವಾದ ನಂತರವೂ ಮಕ್ಕಳು ನಿಮ್ಮ ಮಾತು ಕೇಳದಿದ್ದರೆ, ನಮಾಝ್ ಮಾಡುವುದಕ್ಕೆ ಆಸಕ್ತಿ ತೋರದಿದ್ದರೆ, ಶಿಸ್ತಿನ ರೂಪದಲ್ಲಿ ಅವರಿಗೆ ಗದರಿಸಿ. ನಮಾಝ್ ಮಾಡದಿರುವ ವಿಷಯವು ಗಂಭೀರ ಮತ್ತು ಅಪಾಯಕಾರಿಯಾಗಿ-ದ್ದು ಈ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲದು. ನಾವು ಮಕ್ಕಳನ್ನು ಗದರಿಸುವುದು, ಹೊಡೆಯುವುದು ಶಿಸ್ತು ಕಲಿಸುವುದಕ್ಕಾಗಿ ಹೊರತು ಅವರ ಮೇಲಿರುವ ಕೋಪದಿಂದಲೋ, ಅವರನ್ನು ನಾಶ ಮಾಡುವುದಕ್ಕೋ ಅಲ್ಲ ಎಂಬುದು ನೆನಪಿನಲ್ಲಿರಲಿ.

## 3. ಹಾಸಿಗೆಗಳಲ್ಲಿ ಅವರನ್ನು ಬೇರೆ ಬೇರೆಯಾಗಿ ಮಲಗಿಸುವುದು

ಮಕ್ಕಳಿಗೆ ಹತ್ತು ವರ್ಷವಾದರೆ ಮತ್ತು ಅವರು ಹರೆಯವನ್ನು ತಲುಪಿದರೆ, ಹಾಸಿಗೆಗಳಲ್ಲಿ ಅವರನ್ನು ಬೇರ್ಪಡಿಸಿ ಮಲಗಿಸುವ ವಿಷಯಕ್ಕೆ

ಹೆಚ್ಚಿನ ಪ್ರಾಮುಖ್ಯತೆ ನೀಡಿ. ಅವರನ್ನು ಒಂದೇ ಹಾಸಿಗೆಯಲ್ಲಿ ಒಟ್ಟಿಗೆ ಮಲಗಿಸಲು ಹೋಗಬೇಡಿ. ಏಕೆಂದರೆ, ಇದು ನಂತರ ನೀವು ವಿಷಾದ ಪಡುವುದಕ್ಕೆ ಕಾರಣವಾಗಬಹುದು. (ಅಲ್ಲಾಹು ಕಾಪಾಡಲಿ). ಮಕ್ಕಳನ್ನು ಉತ್ತಮ ನಡವಳಿಕೆ-ಗಳಲ್ಲಿ ಮತ್ತು ಉತ್ತಮ ಮೌಲ್ಯಗಳಲ್ಲಿ ಬೆಳೆಸಿರಿ. ಅವರಲ್ಲಿ ಸದಾಚಾರವನ್ನು ತುಂಬಿ. ಚಿಕ್ಕಂದಿನಲ್ಲೇ ಅವರನ್ನು ಅಶ್ಲೀಲತೆಗಳಿಂದ ಮತ್ತು ಅನೈತಿಕ ವರ್ತನೆಗಳಿಂದ ದೂರವಿರಿಸಿ.

«وَفَرِّقُوا بَيْنَهُمْ فِي الْمَضَاجِعِ».

“ಹಾಸಿಗೆಗಳಲ್ಲಿ ಅವರನ್ನು ಬೇರೆ ಬೇರೆಯಾಗಿ ಮಲಗಿಸಿ.”

ಅಂದರೆ ಅವರನ್ನು ಒಂದೇ ಹಾಸಿಗೆಯಲ್ಲಿ ಒಂದೇ ಕಂಬಳಿಯಲ್ಲಿ ಮಲಗಿಸಬೇಡಿ. ಏಕೆಂದರೆ, ಒಂದೇ ಹಾಸಿಗೆಯಲ್ಲಿ ಮಲಗುವುದರಿಂದ ಅದು ಗಂಭೀರ ಆಪತ್ತು ಮತ್ತು ಅಪಾಯಗಳಿಗೆ ಕಾರ-ಣವಾಗಬಹುದು. ಅದು ಚಾರಿತ್ರ್ಯ ಹನನಕ್ಕೆ ಕಾರಣವಾಗಬಹುದು. ಅದು ವ್ಯಭಿಚಾರ, ಸಲಿಂಗ ಕಾಮ ಮುಂತಾದ ಅಶ್ಲೀಲ ಕೃತ್ಯಗಳಿಗೆ

ಕಾರಣವಾಗಬಹುದು. (ಅಲ್ಲಾಹು ಕಾಪಾಡಲಿ). ಮಕ್ಕಳಲ್ಲಿ ಇಂತಹ ನಡವಳಿಕೆಗಳು ಉಂಟಾಗಲು ಪ್ರಮುಖ ಕಾರಣ ನಾವು ಅವರನ್ನು ಬೆಳೆಸುವುದ-ರಲ್ಲಿ ತೋರಿಸುವ ಗುರುತರವಾದ ತಪ್ಪುಗಳಾಗಿವೆ.

ಅಲ್ಲಾಹು ಹೇಳುತ್ತಾನೆ:

﴿ يَٰٓأَيُّهَا ٱلَّذِينَ ءَامَنُوا۟ لِيَسْتَـْٔذِنكُمُ ٱلَّذِينَ
مَلَكَتْ أَيْمَٰنُكُمْ وَٱلَّذِينَ لَمْ يَبْلُغُوا۟ ٱلْحُلُمَ مِنكُمْ
ثَلَٰثَ مَرَّٰتٍ ۚ مِّن قَبْلِ صَلَوٰةِ ٱلْفَجْرِ وَحِينَ تَضَعُونَ
ثِيَابَكُم مِّنَ ٱلظَّهِيرَةِ وَمِنۢ بَعْدِ صَلَوٰةِ
ٱلْعِشَآءِ ۚ ثَلَٰثُ عَوْرَٰتٍ لَّكُمْ ۚ لَيْسَ عَلَيْكُمْ
وَلَا عَلَيْهِمْ جُنَاحٌۢ بَعْدَهُنَّ ۚ طَوَّٰفُونَ عَلَيْكُم
بَعْضُكُمْ عَلَىٰ بَعْضٍ ۚ كَذَٰلِكَ يُبَيِّنُ ٱللَّهُ
لَكُمُ ٱلْءَايَٰتِ ۗ وَٱللَّهُ عَلِيمٌ حَكِيمٌ ﴿٥٨﴾ ﴾

“ಓ ಸತ್ಯವಿಶ್ವಾಸಿಗಳೇ! ನಿಮ್ಮ ಅಧೀನದಲ್ಲಿರುವ

ಗುಲಾಮರು ಮತ್ತು ಪ್ರೌಢಾವಸ್ಥೆಗೆ ತಲುಪದ ಮಕ್ಕಳು ಮೂರು ಸಮಯಗಳಲ್ಲಿ ನಿಮ್ಮೊಂದಿಗೆ ಪ್ರವೇಶಾನುಮತಿಯನ್ನು ಕೇಳಲಿ. ಫಜ್ರ್ ನಮಾಝ್‌ಗೆ ಮೊದಲು, ನೀವು ಮಧ್ಯಾಹ್ನ (ವಿಶ್ರಾಂತಿಗಾಗಿ) ನಿಮ್ಮ ಬಟ್ಟೆಗಳನ್ನು ಕಳಚುವಾಗ ಮತ್ತು ಇಶಾ ನಮಾಝ್ ಬಳಿಕ. (ಇವು) ನಿಮ್ಮ ಮೂರು ಖಾಸಗಿ ಸಮಯಗಳಾಗಿವೆ. ಇವುಗಳ ಹೊರತಾದ ಸಮಯಗಳಲ್ಲಿ ನಿಮ್ಮ ಮೇಲೆ ಅಥವಾ ಅವರ ಮೇಲೆ ದೋಷವಿಲ್ಲ. ಏಕೆಂದರೆ ಅವರು ನಿರಂತರ ನಿಮ್ಮೊಡನೆ ಬೆರೆಯುವವರಾ-ಗಿದ್ದಾರೆ. ಈ ರೀತಿ ಅಲ್ಲಾಹು ತನ್ನ ನಿಯಮಗಳನ್ನು ನಿಮಗೆ ವಿವರಿಸಿಕೊಡುತ್ತಿದ್ದಾನೆ. ಅಲ್ಲಾಹು ಸರ್ವಜ್ಞನು ಮತ್ತು ವಿವೇಕಪೂರ್ಣನಾಗಿದ್ದಾನೆ." [ಸೂರ ನೂರ್ 24:58]

﴿ يَٰٓأَيُّهَا ٱلَّذِينَ ءَامَنُواْ لِيَسْتَـْٔذِنكُمُ
ٱلَّذِينَ مَلَكَتْ أَيْمَٰنُكُمْ وَٱلَّذِينَ لَمْ
يَبْلُغُواْ ٱلْحُلُمَ مِنكُمْ ثَلَٰثَ مَرَّٰتٍۚ ﴾

"ಓ ಸತ್ಯವಿಶ್ವಾಸಿಗಳೇ! ನಿಮ್ಮ ಅಧೀನದಲ್ಲಿರುವ

ಗುಲಾಮರು ಮತ್ತು ಪ್ರೌಢಾವಸ್ಥೆಗೆ ತಲುಪದ ಮಕ್ಕಳು ಮೂರು ಸಮಯಗಳಲ್ಲಿ ನಿಮ್ಮೊಂದಿಗೆ ಪ್ರವೇಶಾನುಮತಿಯನ್ನು ಕೇಳಲಿ."

ಫಜ್ರ್ ನಮಾಝ್‌ಗೆ ಮೊದಲು, ನೀವು ಮಧ್ಯಾಹ್ನ (ವಿಶ್ರಾಂತಿಗಾಗಿ) ನಿಮ್ಮ ಬಟ್ಟೆಗಳನ್ನು ಕಳಚುವಾಗ ಮತ್ತು ಇಶಾ ನಮಾಝ್ ಬಳಿಕ ಆ ಮೂರು ಸಮಯಗಳಾಗಿವೆ. ಒಂದು ವಿರಾಮದ ಸಮಯ, ಇನ್ನೊಂದು ಮಲಗುವ ಸಮಯ, ಮತ್ತೊಂದು ಬಟ್ಟೆ ಬದಲಾಯಿಸುವ ಸಮಯ. ಈ ಮೂರು ಸಮಯಗಳಲ್ಲಿ ಮಕ್ಕಳು ನಿಮ್ಮ ಕೋಣೆಯನ್ನು ಪ್ರವೇಶಿಸುವಾಗ ನಿಮ್ಮಲ್ಲಿ ಪ್ರವೇಶಾನುಮತಿ-ಯನ್ನು ಕೇಳಬೇಕು. ಏಕೆ? ಏಕೆಂದರೆ, ಅವರು ಹಠಾತ್ತನೆ ನಿಮ್ಮ ಕೋಣೆಯನ್ನು ಪ್ರವೇಶಿಸಿದಾಗ ನಿಮ್ಮ ನಗ್ನ ಭಾಗಗಳನ್ನು ನೋಡಿಬಿಡುವ ಸಾಧ್ಯತೆಗಳಿವೆ. ಕೆಡುಕಿಗೆ ಆಹ್ವಾನಿಸುವ ಮತ್ತು ಅಶ್ಲೀಲ ವರ್ತನೆಗೆ ಕಾರಣವಾಗುವ ಎಲ್ಲಾ ವಿಷಯಗಳನ್ನು ಅಲ್ಲಾಹನ ಗ್ರಂಥ ಮತ್ತು ಪ್ರವಾದಿಯವರ (ﷺ) ಸುನ್ನತ್ ತಡೆಗಟ್ಟಿದೆ. ನಾವು ಮಕ್ಕಳನ್ನು ಬೆಳೆಸುವಾಗ ಈ ವಿಷಯಗಳ ಬಗ್ಗೆ ಗಮನಹರಿಸಬೇಕು. ನಾವು ಮಕ್ಕಳ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಅವರಿಗೆ ಸೂಕ್ತ

ಸಲಹೆ ಸೂಚನೆಗಳನ್ನು ನೀಡಬೇಕು.

«وَفَرِّقُوا بَيْنَهُمْ فِي الْمَضَاجِعِ».

“ಹಾಸಿಗೆಗಳಲ್ಲಿ ಅವರನ್ನು ಬೇರೆ ಬೇರೆಯಾಗಿ ಮಲಗಿಸಿ.”

ನಾವು ಹಾಸಿಗೆಗಳಲ್ಲಿ ಅವರನ್ನು ಬೇರ್ಪಡಿಸುವಂತೆಯೇ ಕೆಟ್ಟ ಜೊತೆಗಾರರಿಂದಲೂ ಅವರನ್ನು ಬೇರ್ಪಡಿಸಬೇಕು. ಇದು ಗಂಭೀರ ವಿಷಯ! ಕೆಟ್ಟ ನಡವಳಿಕೆಯಿರುವ ಝೈದ್ ಮತ್ತು ಉಬೈದ್‌ರೊಂದಿಗೆ ನನ್ನ ಮಗ ಸುತ್ತಾಡುವುದನ್ನು ಕಂಡರೆ ನಾನು ನನ್ನ ಮಗನಿಗೆ ಬುದ್ಧಿ ಹೇಳಬೇಕು. ಅವನನ್ನು ಅವರಿಂದ ಬೇರ್ಪಡಿಸಬೇಕು. ಅವರೊಡನೆ ಸುತ್ತಾಡಿದರೆ ಮತ್ತು ಅವರೊಡನೆ ಬೆರೆತರೆ ಆಗುವ ಅನಾಹುತಗಳ ಬಗ್ಗೆ ಅವನಿಗೆ ತಿಳಿಹೇಳಬೇಕು. ಒಬ್ಬ ವ್ಯಕ್ತಿ ತನ್ನ ಸಂಗಡಿಗನಿಂದ ಅಥವಾ ಜೊತೆಗಾರನಿಂದ ಪ್ರಭಾವಿತನಾಗುತ್ತಾನೆ. ದುಷ್ಟ ಮತ್ತು ಕೆಟ್ಟ ಜೊತೆಗಾರರು ಮತ್ತು ನಿರ್ಲಕ್ಷ್ಯ ಮಾಡುವ ತಂದೆಯಿಂದಾಗಿ ಎಷ್ಟೋ ಯುವಕರು ತಪ್ಪು ದಾರಿಗಳಿದು, ಅನೈತಿಕ ಸಂಬಂಧ, ಅಶ್ಲೀಲತೆ, ಅಮಲು ಪದಾರ್ಥಗಳ

ಸೇವನೆ, ಧರ್ಮಪರಿತ್ಯಾಗ ಮುಂತಾದ ಗಂಭೀರ ತಪ್ಪುಗಳನ್ನು ಮಾಡುತ್ತಿದ್ದಾರೆ. ನನ್ನ ಮಕ್ಕಳು ಯಾರೊಡನೆ ಬೆರೆಯುತ್ತಾರೆ? ಅವರ ಜೊತೆಗಾರರು ಯಾರು? ಎಂದು ತಂದೆ ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ತಂದೆ ಈ ವಿಷಯದಲ್ಲಿ ನಿರ್ಲಕ್ಷ್ಯ ಮಾಡಬಾರದು. ಮಕ್ಕಳ ಗೆಳೆಯರಲ್ಲಿ ಕೆಟ್ಟವರು ದುಷ್ಟರು ಮತ್ತು ಅಲ್ಲಾಹನ ಆಜ್ಞೆಗಳನ್ನು ನಿರ್ಲಕ್ಷಿಸುವವರಿದ್ದರೆ, ಮಕ್ಕಳನ್ನು ಅವರಿಂದ ದೂರವಿರಿಸಬೇಕು. ಸಹೋದರರೇ ಇದೊಂದು ಗಂಭೀರ ವಿಷಯವಾಗಿದೆ.

ಪೂರ್ವಿಕ ಸಜ್ಜನರು ಹೇಳುತ್ತಿದ್ದರು:

لَيْسَ لِلْمَرْءِ أَنْ يَمْشِيَ مَعَ كُلِّ مَنْ شَاءَ.

“ತಾನು ಬಯಸುವ ಎಲ್ಲಾ ಜನರೊಂದಿಗೆ ಸುತ್ತಾಡುವುದು ಒಬ್ಬ ವ್ಯಕ್ತಿಗೆ ಭೂಷಣವಲ್ಲ.”

ಬದಲಾಗಿ, ಸಜ್ಜನರೊಡನೆ, ಒಳ್ಳೆಯ ನಡವಳಿಕೆ-ಯವರೊಡನೆ, ಧರ್ಮನಿಷ್ಠರೊಡನೆ ಮತ್ತು ದೇವ-ಭಯವುಳ್ಳವರೊಡನೆ ಸುತ್ತಾಡಬೇಕು. “ನೀವು ಇಂತಿಂತಹ ವ್ಯಕ್ತಿಯೊಡನೆ ಸೇರಿರಿ, ಇಂತಿಂತಹ

ವ್ಯಕ್ತಿಯೊಡನೆ ಸುತ್ತಾಡಿರಿ. ಇಂತಿಂತಹವನು ಸರಿಯಾಗಿ ನಮಾಝ್ ನಿರ್ವಹಿಸುತ್ತಾನೆ, ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾನೆ, ಅವನೊಂದಿಗೆ ಗೆಳೆತನ ಮಾಡಿ" ಎಂದು ನಿಮ್ಮ ಮಕ್ಕಳಿಗೆ ಆಗಾಗ್ಗೆ ಸಲಹೆ ನೀಡಿ. ಕೆಟ್ಟ ನಡವಳಿಕೆಯ ಜನರಿಂದ ದೂರವಾಗಬೇಕೆಂದು ಆದೇಶಿಸುವಾಗ ಒಳ್ಳೆಯ ನಡವಳಿಕೆಯ ಜನರ ಮಹತ್ವ ಮತ್ತು ಅವರೊಡನೆ ಗೆಳೆತನ ಮಾಡುವುದರಿಂದ ದೊರಕುವ ಲಾಭಗಳ ಬಗ್ಗೆ ಅವರಿಗೆ ತಿಳಿಹೇಳಿ. ಸಹೋದರರೇ, ಮಕ್ಕಳಿಗೆ ಶಿಸ್ತು ಕಲಿಸುವುದು ಬಹಳ ಗಂಭೀರವಾದ ವಿಷಯವಾಗಿದೆ.

⇇ ವಿಷಯಸೂಚಿ

# ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಉಪಯುಕ್ತ ನಿರ್ದೇಶನಗಳು

ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯವರ (ﷺ) ಸುನ್ನತ್‌ನಲ್ಲಿ ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಅನೇಕ ನಿರ್ದೇಶನಗಳಿವೆ. ಮಕ್ಕಳು ಹುಟ್ಟುವುದಕ್ಕೆ ಮೊದಲು ಮತ್ತು ಹುಟ್ಟಿದ ನಂತರ ಅವರ ಬಗ್ಗೆ ಕಾಳಜಿ ವಹಿಸಲು ನಮಗೆ ಈ ನಿರ್ದೇಶನಗಳು ಬಹಳ ಅಗತ್ಯವಾಗಿವೆ.

## 1. ಧರ್ಮನಿಷ್ಠ ಹೆಂಡತಿಯನ್ನು ಆಯ್ಕೆ ಮಾಡುವುದು

ಮಕ್ಕಳ ಪಾಲನೆ-ಪೋಷಣೆ ಮಾಡುವುದು, ಅವರ ನಡವಳಿಕೆಯನ್ನು ಸರಿಪಡಿಸುವುದು ಮತ್ತು ಅವರನ್ನು ನೀತಿವಂತರನ್ನಾಗಿ ಬೆಳೆಸುವುದು ನಿಮ್ಮ ಉದ್ದೇಶವಾಗಿದ್ದರೆ, ಮೊತ್ತಮೊದಲು ಒಬ್ಬ ಧರ್ಮನಿಷ್ಠ ಹೆಂಡತಿಯನ್ನು [ಮಕ್ಕಳ ತಾಯಿಯನ್ನು] ಆಯ್ಕೆ ಮಾಡಿ. ಧರ್ಮನಿಷ್ಠೆ,

ಧಾರ್ಮಿಕತೆ ಹಾಗೂ ದೇವಭಯಕ್ಕೆ ಹೆಸರುವಾಸಿಯಾದ, ಉತ್ತಮ ಗುಣನಡತೆಯ ಹೆಂಡತಿಯನ್ನು ಆಯ್ಕೆ ಮಾಡಿ. ಏಕೆಂದರೆ ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಅವಳು ನಿಮಗೆ ಸಹಾಯ ಮಾಡುತ್ತಾಳೆ. ಪ್ರವಾದಿ(ﷺ) ರವರು ಹೇಳಿದರು:

«تُنْكَحُ الْمَرْأَةُ لِأَرْبَعٍ: لِمَالِهَا وَلِحَسَبِهَا وَجَمَالِهَا وَلِدِينِهَا، فَاظْفَرْ بِذَاتِ الدِّينِ، تَرِبَتْ يَدَاكَ».

“ನಾಲ್ಕು ವಿಷಯಗಳಿಗಾಗಿ ಒಬ್ಬ ಮಹಿಳೆಯನ್ನು ವಿವಾಹ ಮಾಡಿಕೊಳ್ಳುತ್ತಾರೆ: ಅವಳ ಸಂಪತ್ತು, ಅವಳ ವಂಶ, ಅವಳ ಸೌಂದರ್ಯ ಮತ್ತು ಅವಳ ಧರ್ಮ. ಧರ್ಮವಿರುವವಳನ್ನೇ ಆರಿಸಿ; ನಿಮ್ಮ ಕೈ ಧೂಳಿನಿಂದ ಲೇಪಿತವಾದರೂ ಸಹ.” [ಮುಸ್ಲಿಮ್ (1466) ಮತ್ತು ಬುಖಾರಿ (5090)]

ಧರ್ಮನಿಷ್ಠೆಯಿರುವ ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವ ಹೆಂಡತಿ ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ನಿಮಗೆ ಖಂಡಿತ

ಸಹಾಯ ಮಾಡುತ್ತಾಳೆ. ಆದರೆ ಅವಳು ಅದಕ್ಕೆ ವಿರುದ್ಧವಾಗಿದ್ದರೆ, ಅವಳು ನಿಮಗೆ ಯಾವುದೇ ಪ್ರಯೋಜನ ಮಾಡುವುದಿಲ್ಲ. ಅಷ್ಟೇ ಅಲ್ಲ, ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸುವುದರಲ್ಲಿ ಅವಳು ನಿಮಗೆ ತೊಡಕಾಗಿ ಪರಿಣಮಿಸಬಹುದು. ಆದ್ದರಿಂದ ಈ ವಿಷಯದ ಬಗ್ಗೆ ಗಮನಹರಿಸಿ. ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಮತ್ತು ಅವರಿಗೆ ಶಿಸ್ತು ಕಲಿಸಲು ನಿಮಗೆ ಸಹಾಯಕವಾಗುವ ಧರ್ಮನಿಷ್ಠೆ ಮಹಿಳೆಯನ್ನೇ ಆಯ್ಕೆಮಾಡಿ.

## 2. ಸಜ್ಜನ ಮಕ್ಕಳಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುವುದು

ಮಕ್ಕಳು ಹುಟ್ಟುವುದಕ್ಕೆ ಮೊದಲು ಮತ್ತು ಹುಟ್ಟಿದ ನಂತರ, ಯಾವಾಗಲೂ ಮಕ್ಕಳನ್ನು ಸುಧಾರಣೆಗೊಳಿಸಲು ಅಲ್ಲಾಹನಲ್ಲಿ ಪ್ರಾರ್ಥಿಸಿ. ಪವಿತ್ರ ಕುರ್‌ಆನಿನಲ್ಲಿ ಉಲ್ಲೇಖಿಸಿರುವಂತೆ, “ಓ ಅಲ್ಲಾಹ್, ನಾನು ನಿನ್ನಲ್ಲಿ ಸಜ್ಜನ ಮಕ್ಕಳನ್ನು ಬೇಡುತ್ತೇನೆ” ಎಂದು ಹೇಳಿ.

﴿رَبَّنَا هَبْ لَنَا مِنْ أَزْوَٰجِنَا
وَذُرِّيَّٰتِنَا قُرَّةَ أَعْيُنٍ وَٱجْعَلْنَا
لِلْمُتَّقِينَ إِمَامًا ٧٤﴾

“ನಮ್ಮ ಪರಿಪಾಲಕನೇ! ನಮ್ಮ ಪತ್ನಿಯರು ಮತ್ತು ಮಕ್ಕಳಿಂದ ನಮ್ಮ ಕಣ್ಣುಗಳಿಗೆ ತಂಪನ್ನು ಕರುಣಿಸು; ಮತ್ತು ನಮ್ಮನ್ನು ದೇವಭಯವು-ಳ್ಳವರಿಗೆ ಮುಖಂಡರನ್ನಾಗಿ ಮಾಡು.” [ಸೂರ ಫುರ್ಕಾನ್ 25:74]

ಇದು ಸಜ್ಜನ ಸತ್ಯವಿಶ್ವಾಸಿಗಳ ಪ್ರಾರ್ಥನೆಯಾಗಿದೆ. ಅವರು ತಮ್ಮ ಕಣ್ಣುಗಳಿಗೆ ತಂಪು ನೀಡುವಂತಹ ಪತ್ನಿ ಮತ್ತು ಮಕ್ಕಳನ್ನು ನೀಡುವಂತೆ ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಾರೆ. ಧರ್ಮನಿಷ್ಠ ಮತ್ತು ಅಲ್ಲಾಹನ ಆಜ್ಞೆಯನ್ನು ಪಾಲಿಸುವ ಮಕ್ಕಳನ್ನು ನೋಡಿ ಕಣ್ಮನ ತಣಿಯುತ್ತದೆ. ಆದರೆ, ಮಕ್ಕಳು (ಅಲ್ಲಾಹು ಕಾಪಾಡಲಿ) ನೀತಿಗೆಟ್ಟವರು, ಭ್ರಷ್ಟರು ಮತ್ತು ದುಷ್ಟರಾಗಿದ್ದರೆ, ತಂದೆ ಯಾವಾಗಲೂ ದುಃಖಿತನಾಗಿರುತ್ತಾನೆ, ನಿರಾಶನಾಗಿರುತ್ತಾನೆ ಮತ್ತು ಮಕ್ಕಳನ್ನು ದ್ವೇಷಿಸುತ್ತಾನೆ. ಆದ್ದರಿಂದ, ನೀತಿವಂತ ಮಕ್ಕಳನ್ನು ನೀಡಲು ನಿರಂತರವಾಗಿ

ಅಲ್ಲಾಹನನ್ನು ಪ್ರಾರ್ಥಿಸುತ್ತಿರಿ.

ಅಲ್ಲಾಹು ಹೇಳುತ್ತಾನೆ:

﴿ وَإِذَا سَأَلَكَ عِبَادِي عَنِّي فَإِنِّي قَرِيبٌۖ أُجِيبُ دَعۡوَةَ ٱلدَّاعِ إِذَا دَعَانِۖ فَلۡيَسۡتَجِيبُواْ لِي وَلۡيُؤۡمِنُواْ بِي لَعَلَّهُمۡ يَرۡشُدُونَ ١٨٦ ﴾

"ನನ್ನ ದಾಸರು ನನ್ನ ಬಗ್ಗೆ ಕೇಳಿದರೆ, ನಾನು ನಿಜವಾಗಿಯೂ ಅವರಿಗೆ ಹತ್ತಿರವಾಗಿದ್ದೇನೆ; ಪ್ರಾರ್ಥಿಸುವವನು ನನ್ನನ್ನು ಕರೆದು ಪ್ರಾರ್ಥಿಸಿದರೆ ನಾನು ಅವನ ಪ್ರಾರ್ಥನೆಗಳಿಗೆ ಉತ್ತರಿಸುತ್ತೇನೆ (ಎಂದು ಹೇಳಿರಿ)." [ಸೂರ ಬಕರ 2:186]

ನೀವು ಸತತವಾಗಿ ಮತ್ತು ಪ್ರಾಮಾಣಿಕವಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿದರೆ, ಅವನು ನಿಮ್ಮ ಪ್ರಾರ್ಥನೆಗೆ ಉತ್ತರಿಸುತ್ತಾನೆ; ನಿಮ್ಮ ಆಸೆಗಳನ್ನು ಪೂರೈಸುತ್ತಾನೆ ಮತ್ತು ನಿಮ್ಮ ಕೋರಿಕೆಯನ್ನು ನೆರವೇರಿಸುತ್ತಾನೆ. ಇಬ್ರಾಹೀಮ್ (عليه السلام) ಹೀಗೆ

ಪ್ರಾರ್ಥಿಸುತ್ತಿದ್ದರು:

﴿ رَبِّ هَبۡ لِي مِنَ ٱلصَّٰلِحِينَ ١٠٠ ﴾

“ನನ್ನ ಪರಿಪಾಲಕನೇ! ನನಗೆ ನೀತಿವಂತ (ಸಂತಾನವನ್ನು) ಕರುಣಿಸು.” [ಸೂರ ಸಾಫ್ಫಾತ್ 37:100]

ನೀತಿವಂತ ಮಕ್ಕಳನ್ನು ನೀಡುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿರಿ. ನೀವು ಈಗಾಗಲೇ ಮಕ್ಕಳನ್ನು ಹೊಂದಿದ್ದರೆ, ಅವರನ್ನು ನೀತಿವಂತರನ್ನಾ-ಗಿಸಲು ಅಲ್ಲಾಹನಲ್ಲಿ ಪ್ರಾರ್ಥಿಸಿರಿ. “ಓ ಅಲ್ಲಾಹ್, ನನ್ನ ಮಕ್ಕಳನ್ನು ಸರಿಪಡಿಸು; ಓ ಅಲ್ಲಾಹ್, ನನ್ನ ಮಕ್ಕಳನ್ನು ಸುರಕ್ಷಿತ ಮಾರ್ಗದಲ್ಲಿ ಬೆಳೆಯುವಂತೆ ಮಾಡು; ಓ ಅಲ್ಲಾಹ್, ನನ್ನ ಮಕ್ಕಳನ್ನು ನೇರಗೊಳಿಸು; ಓ ಅಲ್ಲಾಹ್, ನನ್ನ ಮಕ್ಕಳಿಗೆ ವಿದ್ಯೆ ಕಲಿಸು; ಓ ಅಲ್ಲಾಹ್, ನನ್ನ ಮಕ್ಕಳಿಗೆ ತಿಳು-ವಳಿಕೆಯನ್ನು ನೀಡು, ಓ ಅಲ್ಲಾಹ್, ನನ್ನ ಮಕ್ಕಳಿಗೆ ಅವರ ವ್ಯವಹಾರಗಳಲ್ಲಿ ಅತ್ಯಂತ ಪ್ರಾಮಾಣಿಕ ದಾರಿಯನ್ನು ತೋರಿಸು.”

ನಿಮ್ಮ ಮಕ್ಕಳಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿ. ಆದರೆ

ಮಕ್ಕಳಿಗೆ ವಿರುದ್ಧವಾಗಿ ಪ್ರಾರ್ಥಿಸಬೇಡಿ. ಮಕ್ಕಳು ಎಷ್ಟೇ ಕೆಟ್ಟವರಾದರೂ, ಎಷ್ಟೇ ಮೊಂಡುತನ ತೋರಿಸಿದರೂ, ಎಷ್ಟೇ ಅವಿಧೇಯತೆ ಪ್ರಕಟಿಸಿದರೂ ದಯವಿಟ್ಟು ಅವರಿಗೆ ವಿರುದ್ಧವಾಗಿ ಪ್ರಾರ್ಥಿಸಬೇಡಿ; ಏಕೆಂದರೆ ಪ್ರಾರ್ಥನೆಗಳಿಗೆ ಉತ್ತರ ಸಿಗುವ ಸಮಯದೊಂದಿಗೆ ನಿಮ್ಮ ಪ್ರಾರ್ಥನೆಯು ಹೊಂದಾಣಿಕೆಯಾದರೆ, ನಿಮ್ಮ ಪ್ರಾರ್ಥನೆಗೆ ಉತ್ತರ ಸಿಗುತ್ತದೆ. ಮಕ್ಕಳಿಗೆ ದೇವಭಯ, ಸನ್ಮಾರ್ಗ, ಅಚಂಚಲತೆ, ಧರ್ಮನಿಷ್ಠೆ, ಮುಂತಾದವುಗಳಿಗಾಗಿ ಪ್ರಾರ್ಥಿಸಿರಿ. ಮಕ್ಕಳು ಅಲ್ಲಾಹನ ನಿಯಮಗಳಿಗೆ ಬದ್ಧರಾಗುವಂತೆ ಮಾಡಬೇಕೆಂದು ಪ್ರಾರ್ಥಿಸಿರಿ. ಅಲ್ಲಾಹನಲ್ಲಿ ಮತ್ತೆ ಮತ್ತೆ ಸತತವಾಗಿ ಪ್ರಾರ್ಥಿಸಿರಿ. ಪ್ರಾರ್ಥನೆಗೆ ಉತ್ತರ ಸಿಗುವುದಿಲ್ಲವೆಂದು ನಿರಾಶರಾಗಬೇಡಿ. ಅಲ್ಲಾಹನ ಕರುಣೆಯಲ್ಲಿ ಭರವಸೆಯನ್ನು ಕಳೆದುಕೊಳ್ಳಬೇಡಿ. ನಿರಂತರ ಅಲ್ಲಾಹನಲ್ಲಿ ಪ್ರಾರ್ಥಿಸಿರಿ. ಅವನು ನಿಮಗೆ ಖಂಡಿತ ಉತ್ತರಿಸುತ್ತಾನೆ. ನಿಮ್ಮ ಪ್ರಾರ್ಥನೆಯಿಂದ ಅವನು ನಿಮಗೆ ಅದ್ಭುತ ಪ್ರತಿಫಲಗಳನ್ನು ನೀಡುತ್ತಾನೆ.

## 3. ಉತ್ತಮ ಹೆಸರನ್ನು ಆಯ್ಕೆ ಮಾಡುವುದು

ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಮತ್ತೊಂದು ಅಂಶವೇನೆಂದರೆ, ಅವರಿಗೆ ಸರಿಯಾದ ಹೆಸರನ್ನು ಆಯ್ಕೆ ಮಾಡುವುದು. ಮಕ್ಕಳಿಗೆ ಅಲ್ಲಾಹನ ದಾಸ್ಯತ್ವದೊಂದಿಗೆ ಸಂಬಂಧವಿರುವ ಹೆಸರುಗಳನ್ನು ಆಯ್ಕೆ ಮಾಡಿ. ಉದಾಹರಣೆಗೆ, ಅಬ್ದುಲ್ಲಾ (ಅಲ್ಲಾಹನ ದಾಸ), ಅಬ್ದುರ್-ರಹ್ಮಾನ್ (ಕರುಣಾಮಯಿಯ ದಾಸ), ಮುಹಮ್ಮದ್ (ಪ್ರ-ಶಂಸಿಸಲ್ಪಟ್ಟವನು), ಸಾಲಿಹ್ (ಧರ್ಮನಿಷ್ಠ). ಹೆಚ್ಚಿನ ಸಂದರ್ಭಗಳಲ್ಲೂ ಹೆಸರುಗಳು ಮಕ್ಕಳ ಆಲೋಚನೆಗಳ ಮೇಲೆ ಪ್ರಭಾವ ಬೀರುತ್ತವೆ. ಒಂದು ನಾಣ್ಣುಡಿ ಹೀಗಿದೆ:

لِكُلٍّ مِنَ اسْمِهِ نَصِيبٌ.

“ಪ್ರತಿಯೊಬ್ಬರಿಗೂ ಅವರ ಹೆಸರಿನ ಒಂದು ಪಾಲಿದೆ.”

ಹೆಸರುಗಳು ಮನುಷ್ಯನ ಮೇಲೆ ಪ್ರಭಾವ

ಬೀರುತ್ತವೆ. ನೀವು ಮಕ್ಕಳಿಗೆ ಅಬ್ದುಲ್ಲಾ, ಅಬ್ದುರ್-ರಹ್ಮಾನ್, ಅಬ್ದುರ್-ರಹೀಮ್ (ಕರುಣಾಮಯಿಯ ದಾಸ), ಅಬ್ದುಲ್-ಗಫೂರ್ (ಕ್ಷಮಿಸುವವನ ದಾಸ) ಮುಂತಾದ ಹೆಸರುಗಳನ್ನಿಟ್ಟರೆ, ಅಥವಾ ಮುಹಮ್ಮದ್, ಸಾಲಿಹ್ ಮುಂತಾದ ಹೆಸರುಗಳನ್ನಿಟ್ಟರೆ, ಆ ಹೆಸರು ಅವರ ಮೇಲೆ ಪ್ರಭಾವ ಬೀರುತ್ತದೆ.

ಪ್ರವಾದಿ(ﷺ) ರವರು ಹೇಳುತ್ತಾರೆ:

«أَحَبُّ الْأَسْمَاءِ إِلَى اللَّهِ تَعَالَى عَبْدُ اللَّهِ وَعَبْدُ الرَّحْمَنِ».

“ಅಲ್ಲಾಹನಿಗೆ ಅತ್ಯಂತ ಪ್ರಿಯವಾದ ಹೆಸರುಗಳು ಅಬ್ದುಲ್ಲಾ ಮತ್ತು ಅಬ್ದುರ್-ರಹ್ಮಾನ್.” [ಸುನನ್ ಅಬೂ ದಾವೂದ್ (4949)]

ನೀವು ನಿಮ್ಮ ಮಗುವಿಗೆ ಅಬ್ದುಲ್ಲಾ ಎಂದು ಹೆಸರಿಟ್ಟರೆ, ಆ ಹೆಸರಿನ ಅರ್ಥವನ್ನು ಮಗುವಿಗೆ ಕಲಿಸಿಕೊಡಿ. ಅಬ್ದುಲ್ಲಾ ಎಂದರೆ ಅಲ್ಲಾಹನ ದಾಸ, ನೀನು ಅಲ್ಲಾಹನ ದಾಸನಾಗಿದ್ದು ಅಲ್ಲಾಹು ನಿನ್ನನ್ನು ಸೃಷ್ಟಿಸಿದ್ದಾನೆ. ಅವನು ನಿನ್ನ

ಒಡೆಯನಾಗಿರುವುದರಿಂದ ಅವನ ಆಜ್ಞೆಗಳನ್ನು ಪಾಲಿಸುವುದು, ಅವನಿಗೆ ವಿಧೇಯವಾಗಿ ನಡೆದುಕೊಳ್ಳುವುದು ಮತ್ತು ಅವನ ನಿಯಮಗಳ ಪ್ರಕಾರ ಜೀವಿಸುವುದು ನಿನ್ನ ಕರ್ತವ್ಯವಾಗಿದೆ. ನೀವು ನಿಮ್ಮ ಮಗುವಿಗೆ ಸಾಲಿಹ್ ಎಂದು ಹೆಸರಿಟ್ಟರೆ ಮಗುವಿಗೆ ಅದರ ಅರ್ಥವನ್ನು ಕಳಿಸಿಕೊಡಿ. ಸಾಲಿಹ್ ಎಂದರೆ ಧರ್ಮನಿಷ್ಠ. ಧರ್ಮನಿಷ್ಠನು ಯಾವಾಗಲೂ ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾನೆ ಮತ್ತು ಅವನಿಗೆ ವಿಧೇಯನಾಗಿರುತ್ತಾನೆ. ಧರ್ಮನಿಷ್ಠನು ಅಲ್ಲಾಹು ವಿರೋಧಿಸಿದ ಕಾರ್ಯಗಳಿಂದ ದೂರವಿರುತ್ತಾನೆ. ಹೀಗೆ ನೀವು ಮಕ್ಕಳಿಗೆ ಯಾವ ಹೆಸರು ನೀಡುತ್ತಿರೋ ಆ ಹೆಸರಿನ ಬಗ್ಗೆ ಮತ್ತು ಅದರ ಅರ್ಥದ ಬಗ್ಗೆ ನಿಮ್ಮ ಮಕ್ಕಳಿಗೆ ತಿಳುವಳಿಕೆಯನ್ನು ನೀಡಿ.

## 4. ಸಂಭೋಗದ ಸಮಯದಲ್ಲಿ ಅಲ್ಲಾಹನಿಂದ ರಕ್ಷಣೆ ಪಡೆಯುವುದು

ಮಕ್ಕಳನ್ನು ನೀತಿವಂತರಾಗಿ ಬೆಳೆಸಲು ಸಹಾಯಕವಾಗುವ ಇನ್ನೊಂದು

ಅಂಶವೇನೆಂದರೆ, ಪತ್ನಿಯೊಂದಿಗೆ ಲೈಂಗಿಕ ಸಂಪರ್ಕ ಮಾಡುವಾಗ ಬಹಿಷ್ಕೃತ ಶೈತಾನನಿಂದ ಅಲ್ಲಾಹನಲ್ಲಿ ರಕ್ಷಣೆಯನ್ನು ಬೇಡುವುದು.

ಪ್ರವಾದಿ(ﷺ) ರವರು ಹೇಳುತ್ತಾರೆ:

«لَوْ أَنَّ أَحَدَكُمْ إِذَا أَرَادَ أَنْ يَأْتِيَ أَهْلَهُ قَالَ: بِسْمِ اللَّهِ، اللَّهُمَّ جَنِّبْنَا الشَّيْطَانَ وَجَنِّبِ الشَّيْطَانَ مَا رَزَقْتَنَا، فَإِنَّهُ إِنْ يُقَدَّرْ بَيْنَهُمَا وَلَدٌ فِي ذَلِكَ لَمْ يَضُرَّهُ شَيْطَانٌ أَبَدًا».

“ನಿಮ್ಮಲ್ಲೊಬ್ಬರು ತನ್ನ ಪತ್ನಿಯೊಂದಿಗೆ ಲೈಂಗಿಕ ಸಂಪರ್ಕ ಮಾಡಲು ಬಯಸಿದರೆ ಅವರು ಹೀಗೆ ಹೇಳಲಿ: ಓ ಅಲ್ಲಾಹ್, ನಮ್ಮನ್ನು ಶೈತಾನನಿಂದ ದೂರವಿಡು ಮತ್ತು ನಮಗೆ ನೀನು ಕರುಣಿಸುವ ಮಕ್ಕಳಿಂದ ಶೈತಾನನನ್ನು ದೂರವಿಡು. ಆ ಲೈಂಗಿಕ ಸಂಬಂಧದಲ್ಲಿ ಅಲ್ಲಾಹು ಅವರಿಗೆ ಮಗುವನ್ನು ನಿರ್ಣಯಿಸಿದ್ದರೆ ಆ ಮಗುವಿಗೆ

ಶೈತಾನನು ಎಂದಿಗೂ ತೊಂದರೆ ಕೊಡಲಾರ.” [ಬುಖಾರಿ (7396)]

## 5. ತಂದೆಯು ನೀತಿವಂತ ಮಾದರಿಯಾಗಿರುವುದು

ಮಕ್ಕಳನ್ನು ನೀತಿವಂತರಾಗಿ ಬೆಳೆಸುವುದರಲ್ಲಿ ಸಹಾಯಕವಾಗುವ ಇನ್ನೊಂದು ಪ್ರಮುಖ ಅಂಶವೇನೆಂದರೆ, ಮಾತಾಪಿತರು ಮಕ್ಕಳಿಗೆ ಉತ್ತಮ ಮಾದರಿಯಾಗಿರುವುದು.

ಅಲ್ಲಾಹು ಹೇಳುತ್ತಾನೆ:

﴿يَٰٓأَيُّهَا ٱلَّذِينَ ءَامَنُوا۟ لِمَ تَقُولُونَ مَا
لَا تَفْعَلُونَ ۝٢ كَبُرَ مَقْتًا عِندَ ٱللَّهِ
أَن تَقُولُوا۟ مَا لَا تَفْعَلُونَ ۝٣﴾

“ಓ ಸತ್ಯವಿಶ್ವಾಸಿಗಳೇ, ನೀವು ಮಾಡದಿರುವುದನ್ನು ನೀವೇಕೆ ಹೇಳುತ್ತೀರಿ? ನೀವು ಮಾಡದಿರುವುದನ್ನು ಹೇಳುವುದು ಅಲ್ಲಾಹನ ಬಳಿ ಮಹಾ

ಕೋಪದ ವಿಷಯವಾಗಿದೆ." [ಸೂರ ಸಫ್ಫ್ 61:2-3]

ಮಕ್ಕಳು ನೀತಿವಂತರಾಗಿ ಬೆಳೆಯಬೇಕಾದರೆ ಪೋಷಕರು ಅವರಿಗೆ ನೀತಿವಂತ ಮಾದರಿ-ಗಳಾಗಿರಬೇಕಾದದು ಅತ್ಯಗತ್ಯ. ವಿದ್ವಾಂಸರು ಹೇಳುತ್ತಾರೆ:

**إِنَّ الدَّعْـــوَةَ بِلِسَـــانِ الْحَـــالِ أَبْلَغُ مِنَ الدَّعْـــوَةِ بِلِسَـــانِ الْمَقَالِ.**

"ಮಾತಿನ ಮೂಲಕ ಜನರನ್ನು ಒಳಿತಿಗೆ ಕರೆಯು-ವುದಕ್ಕಿಂತ ಕ್ರಿಯೆಯ ಮೂಲಕ ಜನರನ್ನು ಒಳಿತಿಗೆ ಕರೆಯುವುದು ಹೆಚ್ಚು ಪ್ರಭಾವಶಾಲಿಯಾಗಿದೆ."

ನಾವು ಏನೇ ಹೇಳುವುದಾದರೂ ಮೊದಲು ನಾವು ಅದನ್ನು ಮಾಡಬೇಕು. ನಾವು ಅದರಲ್ಲಿ ಮಕ್ಕಳಿಗೆ ಮಾದರಿಯಾಗಿರಬೇಕು. ಪ್ರವಾದಿ(ﷺ) ರವರ ನಡವಳಿಕೆಯು ಹೀಗೆಯೇ ಆಗಿತ್ತು. ಪ್ರವಾದಿ(ﷺ) ರವರ ಬಗ್ಗೆ ಅಲ್ಲಾಹು ಹೇಳುವುದು ನೋಡಿ:

﴿ لَّقَدْ كَانَ لَكُمْ فِي رَسُولِ ٱللَّهِ أُسْوَةٌ حَسَنَةٌ لِّمَن كَانَ يَرْجُواْ ٱللَّهَ وَٱلْيَوْمَ ٱلْآخِرَ وَذَكَرَ ٱللَّهَ كَثِيرًا ﴿٢١﴾ ﴾

ನಿಶ್ಚಯವಾಗಿ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗೆ ಅತ್ಯುತ್ತಮ ಮಾದರಿಯಿದೆ; ನಿಮ್ಮ ಪೈಕಿ ಅಲ್ಲಾಹನನ್ನು ಮತ್ತು ಅಂತ್ಯದಿನವನ್ನು ನಿರೀಕ್ಷಿಸು-ವವರು ಹಾಗೂ ಅಲ್ಲಾಹನನ್ನು ಅತಿ ಹೆಚ್ಚು ಸ್ಮರಿ-ಸುವವರಿಗೆ.” [ಸೂರ ಅಹ್ಝಾಬ್ 33:21]

ಹೀಗೆ ನೀವು ನಿಮ್ಮ ಮಕ್ಕಳಿಗೆ ಉತ್ತಮ ಮಾದರಿಯಾಗಿರಿ. ಅಲ್ಲಾಹನ ಆದೇಶಗಳನ್ನು ಪಾಲಿಸುವುದರಲ್ಲಿ ಮತ್ತು ಅವನು ವಿರೋಧಿಸಿದ ಕಾರ್ಯಗಳಿಂದ ದೂರವಿರು-ವುದರಲ್ಲಿ ನೀವು ಮಕ್ಕಳಿಗೆ ಮಾದರಿಯಾಗಿರಿ. ನೀವು ನಿಮ್ಮ ಮಕ್ಕಳೊಂದಿಗೆ ನಮಾಝ್ ಮಾಡಿ ಎಂದು ಆದೇಶಿಸುವುದಕ್ಕೆ ಮೊದಲು ನೀವು ನಮಾಝ್ ಮಾಡುವವರಾಗಿ; ನಮಾಝಿನ ಸಮಯವಾಗುವಾಗ ಮಸೀದಿಗೆ ಹೋಗುವವರಾಗಿರಿ. ಅದೇ ರೀತಿ ನೀವು ಮಕ್ಕಳಿಗೆ ಧೂಮಪಾನ ಮಾಡಬೇಡಿ, ಅಮಲು ಪದಾರ್ಥ

ಸೇವಿಸಬೇಡಿ, ಅಥವಾ ಅಶ್ಲೀಲ ಮಾತುಗಳನ್ನಾಡಬೇಡಿ ಎಂದು ಆದೇಶಿಸುವಾಗ ಮೊದಲು ನೀವು ಅವೆಲ್ಲವನ್ನೂ ನಿಮ್ಮ ಜೀವನದಿಂದ ಮುಕ್ತಗೊಳಿಸಿ. ನೀವು ಮಕ್ಕಳಿಗೆ ಆದೇಶಿಸುವ ಕಾರ್ಯಗಳು ನಿಮ್ಮ ಜೀವನದಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತಿರಲಿ. ಹಾಗಾದರೆ ಮಾತ್ರ ನಿಮ್ಮ ಆದೇಶಗಳು ಫಲಕಾರಿಯಾಗಲು ಸಾಧ್ಯ. ನೀವು ಸ್ವತಃ ಕೆಟ್ಟ ಗುಣಗಳಿರುವ ವ್ಯಕ್ತಿಯಾಗಿದ್ದು ನಿಮ್ಮ ಮಕ್ಕಳನ್ನು ನೀತಿವಂತರನ್ನಾಗಿ ಮಾಡಲು ಪರಿಶ್ರಮಿಸುವುದು ವಿರೋಧಭಾಸವಾಗಿದೆ. ನೀವು ಮಾಡದ ಒಂದು ಕಡ್ಡಾಯ ಕಾರ್ಯವನ್ನು ನಿಮ್ಮ ಮಕ್ಕಳಿಗೆ ಆದೇಶಿಸುವುದು ಎಷ್ಟು ಸರಿ? ನೀವು ತೊರೆಯದ ಒಂದು ನಿಷೇಧಿತ ಕಾರ್ಯವನ್ನು ನಿಮ್ಮ ಮಕ್ಕಳಿಗೆ ಮಾಡಬಾರದೆಂದು ಹೇಳುವುದು ಎಷ್ಟು ಸರಿ? ನೀವು ನಿಮ್ಮ ಮಕ್ಕಳಿಗೆ ಏನಾದರೂ ಆದೇಶಿಸುವುದಾದರೆ ಮೊದಲು ನೀವು ನಿಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳಿ. ಹಾಗೆಯೇ, ನೀವು ನಿಮ್ಮ ಮಕ್ಕಳಿಗೆ ಏನಾದರೂ ವಿರೋಧಿಸುವುದಾದರೆ ಮೊದಲು ಅದನ್ನು ನಿಮ್ಮ ಜೀವನದಿಂದ ನಿವಾರಿಸಿಕೊಳ್ಳಿ. ಮಕ್ಕಳು ನಿಮ್ಮ ಮಾತು ಮತ್ತು ಕ್ರಿಯೆಯಲ್ಲಿ ವ್ಯತ್ಯಾಸವನ್ನು ಕಾಣದಂತೆ ಜಾಗರೂಕತೆ ವಹಿಸಿಕೊಳ್ಳಿ.

ಪ್ರವಾದಿ ಶುಐಬ್ (عليه السلام) ತಮ್ಮ ಜನತೆಯೊಂದಿಗೆ ಹೇಳುತ್ತಿದ್ದರು:

﴿وَمَآ أُرِيدُ أَنۡ أُخَالِفَكُمۡ إِلَىٰ مَآ أَنۡهَىٰكُمۡ عَنۡهُ﴾

“ನಾನು ನಿಮಗೆ ವಿರೋಧಿಸುವ ಒಂದು ಕಾರ್ಯವನ್ನು (ನಾನು ಸ್ವತಃ ಮಾಡುವ ಮೂಲಕ) ನಿಮಗೆ ವಿರೋಧವಾಗಿ ಸಾಗಲು ನಾನು ಬಯಸುವುದಿಲ್ಲ.” [ಸೂರ ಹೂದ್ 11:88]

## 6. ಒಳಿತನ್ನು ಆಜ್ಞಾಪಿಸುವುದು ಮತ್ತು ಕೆಡುಕನ್ನು ವಿರೋಧಿಸುವುದು

ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಇನ್ನೊಂದು ಅಂಶವೇನೆಂದರೆ, ಮಕ್ಕಳಿಗೆ ಒಳಿತನ್ನು ಬೋಧಿಸುವುದು ಮತ್ತು ಕೆಡುಕನ್ನು ವಿರೋಧಿಸುವುದು. ಮಕ್ಕಳಿಗೆ ಸದಾ ಒಳಿತನ್ನು, ನೀತಿಯನ್ನು, ಸ್ಥಿರತೆಯನ್ನು, ಧರ್ಮನಿಷ್ಠೆಯನ್ನು,

ಕುಟುಂಬ ಸಂಬಂಧ ಜೋಡಣೆಯನ್ನು ಬೋಧಿಸುತ್ತಿರಿ. ಅವರನ್ನು ಕೆಡುಕುಗಳಿಂದ, ಪಾಪಗಳಿಂದ, ಅನೈತಿಕ ವರ್ತನೆಗಳಿಂದ ಸದಾ ದೂರವಿರಿಸಿ. ಯಾವಾಗಲೂ ಮಕ್ಕಳ ಬಗ್ಗೆ ಗಮನಹರಿಸುತ್ತಿರಿ. ಅವರು ಯಾವುದಾದರೂ ಕಡ್ಡಾಯ ಕರ್ತವ್ಯವನ್ನು ನಿರ್ವಹಿಸಲು ಅನಾಸಕ್ತಿ ತೋರಿದರೆ ನಯವಾಗಿ ಎಚ್ಚರಿಸಿರಿ.

﴿ وَأۡمُرۡ أَهۡلَكَ بِٱلصَّلَوٰةِ وَٱصۡطَبِرۡ عَلَيۡهَاۖ ﴾

“ನಿಮ್ಮ ಕುಟುಂಬಕ್ಕೆ ನಮಾಝ್ ಮಾಡಲು ಆಜ್ಞಾಪಿಸಿ, ಮತ್ತು ಅದರಲ್ಲಿ ತಾಳ್ಮೆಯಿಂದಿರಿ.” [ಸೂರ ತಾಹಾ 20:132]

«مُرُوا أَبْنَاءَكُمْ بِالصَّلَاةِ».

“ನಿಮ್ಮ ಮಕ್ಕಳಿಗೆ ನಮಾಝ್ ಮಾಡಲು ಆಜ್ಞಾಪಿಸಿ...”

ಮಕ್ಕಳಿಗೆ ಒಳಿತನ್ನು ಆಜ್ಞಾಪಿಸಿರಿ ಮತ್ತು ಅವರ ಧರ್ಮವನ್ನು ಮತ್ತು ಸ್ವಭಾವವನ್ನು ನಾಶ ಮಾಡುವ ಕಾರ್ಯಗಳನ್ನು ವಿರೋಧಿಸಿರಿ.

ಅವರ ಸಹಜ ಮನೋಧರ್ಮಕ್ಕೆ ವಿರುದ್ಧವಾದ ಯಾವುದೇ ಕಾರ್ಯಗಳನ್ನು ಅವರು ಮಾಡುವುದರ ಬಗ್ಗೆ (ಅಲ್ಲಾಹು ಕಾಪಾಡಲಿ) ಪರಿಪೂರ್ಣ ನಿಗಾ ವಹಿಸಿರಿ. ಈಗಿನ ಕಾಲದಲ್ಲಿ ಮಕ್ಕಳು ಬಹಳ ಚಿಕ್ಕ ವಯಸ್ಸಿನಲ್ಲಿ ಸುಳ್ಳು ಹೇಳುವುದು ಕಾಣಬಹುದು. ಹೌದು! ಮಕ್ಕಳು ಸುಳ್ಳು ಹೇಳುತ್ತಾರೆ. ಸುಳ್ಳು ಹೇಳುವುದು ಮನುಷ್ಯನ ಸಹಜ ಮನೋಧರ್ಮಕ್ಕೆ ವಿರು-ದ್ಧವಾಗಿರುವಾಗ ಈ ಪುಟ್ಟ ಮಗು ಸುಳ್ಳು ಹೇಳಲು ಕಲಿತದ್ದು ಎಲ್ಲಿಂದ? ಸಂಶಯವಿಲ್ಲ; ಮಗು ತನ್ನ ತಂದೆ, ತಾಯಿ, ಸಹೋದರ, ಸಹೋದರಿ, ಮುಂತಾದ ಆಪ್ತರಿಂದ ಸುಳ್ಳು ಹೇಳಲು ಕಲಿಯುತ್ತದೆ. ಮಕ್ಕಳೊಡನೆ ತಂದೆ-ತಾಯಿ ಸುಳ್ಳು ಹೇಳುವುದು ನಮ್ಮಲ್ಲಿ ಈಗ ಸಾಮಾನ್ಯವಾಗಿ ಬಿಟ್ಟಿದೆ. ಕೆಲವರು ತಮಾಷೆಗಾಗಿ ಹೀಗೆ ಮಾಡುತ್ತಾರೆ. ಉದಾಹರಣೆಗೆ, ತಂದೆ ತನ್ನ ಎರಡು ಅಥವಾ ಮೂರು ವರ್ಷದ ಮಗನನ್ನು ಕರೆದು, “ಬಾ ನಿನಗೊಂದು ವಸ್ತುವನ್ನು ತಂದಿದ್ದೇನೆ” ಎಂದು ಬೆರಳುಗಳನ್ನು ಮಡಚಿ ತೋರಿಸುತ್ತಾನೆ. ಮಗು ಕೈಯಲ್ಲಿ ಏನಿದೆ ಎಂದು ತಿಳಿದುಕೊಳ್ಳಲು ಕುತೂಹಲದಿಂದ ಬೆರಳುಗಳನ್ನು ಒಂದೊಂದಾಗಿ ತೆರೆಯುತ್ತದೆ. ಆದರೆ ಅದರಲ್ಲಿ

ಏನು ಇರುವುದಿಲ್ಲ. ಮಗುವಿಗೆ ನಿರಾಶೆಯಾಗುತ್ತದೆ. ತಂದೆ ಇದನ್ನು ನೋಡಿ ಗೊಳ್ಳೆಂದು ನಗುತ್ತಾನೆ. ಇದು ತಂದೆ ಮಕ್ಕಳಿಗೆ ಸುಳ್ಳು ಹೇಳಲು ಕಲಿಸುವ ಒಂದು ರೀತಿಯಾಗಿದೆ.

ಅಬ್ದುಲ್ಲಾ ಬಿನ್ ಅಮ್ರ್ (ﷺ) ಹೇಳುತ್ತಾರೆ:

دَعَتْنِي أُمِّي يَوْمًا وَرَسُولُ اللَّهِ صَلَّى اللَّهُ عَلَيْهِ وَسَلَّمَ قَاعِدٌ فِي بَيْتِنَا، فَقَالَتْ: هَا تَعَالَ أُعْطِيكَ. فَقَالَ لَهَا رَسُولُ اللَّهِ صَلَّى اللَّهُ عَلَيْهِ وَسَلَّمَ: «وَمَا أَرَدْتِ أَنْ تُعْطِيهِ». قَالَتْ: أُعْطِيهِ تَمْرًا. فَقَالَ لَهَا رَسُولُ اللَّهِ صَلَّى اللَّهُ عَلَيْهِ وَسَلَّمَ: «أَمَا إِنَّكِ لَوْ لَمْ تُعْطِيهِ شَيْئًا كُتِبَتْ عَلَيْكِ كِذْبَةٌ».

“ಒಂದಿನ ಪ್ರವಾದಿ(ﷺ) ರವರು ನಮ್ಮ

ಮನೆಯಲ್ಲಿ ಕುಳಿತಿದ್ದಾಗ ನನ್ನ ತಾಯಿ ನನ್ನನ್ನು ಕರೆದು ಹೇಳಿದರು: “ಬಾ ನಿನಗೊಂದು ವಸ್ತು ಕೊಡುತ್ತೇನೆ.” ಆಗ ಪ್ರವಾದಿ(ﷺ) ರವರು ನನ್ನ ತಾಯಿಯೊಡನೆ ಕೇಳಿದರು: “ನೀನು ಅವನಿಗೆ ಏನು ಕೊಡಲು ಬಯಸುತ್ತಿರುವೆ?” ತಾಯಿ ಉತ್ತರಿಸಿದಳು: “ಖರ್ಜೂರವನ್ನು.” ಆಗ ಪ್ರವಾದಿ(ﷺ) ರವರು ಹೇಳಿದರು: “ಒಂದು ವೇಳೆ ನೀನು ಅವನಿಗೆ ಏನೂ ಕೊಡದಿರುತ್ತಿದ್ದರೆ ನಿಶ್ಚಯವಾಗಿಯೂ ನಿನ್ನ ಖಾತೆಯಲ್ಲಿ ಒಂದು ಸುಳ್ಳು ದಾಖಲಾಗುತ್ತಿತ್ತು.” [ಅಹ್ಮದ್]

ಅಬೂ ಹುರೈರ (رضي الله عنه) ಹೇಳುತ್ತಾರೆ:

**مَنْ قَالَ لِصَبِيٍّ: تَعَالَ هَاكَ تَمْرًا، ثُمَّ لَمْ يُعْطِهِ شَيْئًا فَهِيَ كِذْبَةٌ.**

“ಯಾರಾದರೂ ಮಗುವಿನೊಡನೆ, ಬಾ ನಿನಗೆ ಖರ್ಜೂರ ಕೊಡುತ್ತೇನೆ ಎಂದು ಹೇಳಿ ನಂತರ ಏನು ಕೊಡದಿದ್ದರೆ, ಅವನು ಸುಳ್ಳು ಹೇಳಿದವನಾಗುತ್ತಾನೆ.”

ನಾವು ಇದನ್ನು ತಮಾಷೆ ಮತ್ತು ಮೋಜಿಗಾಗಿ

ಮಾಡುತ್ತೇವೆ. ಆದರೆ ನಮ್ಮ ಖಾತೆಯಲ್ಲಿ ಇದು ಸುಳ್ಳು ಹೇಳಿದ್ದಾಗಿ ದಾಖಲಾಗುತ್ತದೆ. ಇದಕ್ಕಿಂತಲೂ ಅಪಾಯಕಾರಿ ವಿಷಯವೇನೆಂದರೆ ನಾವು ಇದರ ಮೂಲಕ ಮಕ್ಕಳಿಗೆ ಚಿಕ್ಕಂದಿನಲ್ಲೇ ಸುಳ್ಳು ಹೇಳಲು ಕಲಿಸುತ್ತೇವೆ.

## 7. ಮಕ್ಕಳ ಚಾರಿತ್ರ್ಯವನ್ನು ಕೆಡಿಸುವ ವಿಷಯಗಳಿಂದ ಅವರನ್ನು ದೂರವಿಡುವುದು

ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಇನ್ನೊಂದು ಅಂಶವೇನೆಂದರೆ, ಅವರ ಉತ್ತಮ ಚಾರಿತ್ರ್ಯ-ವನ್ನು ಹಾಳುಮಾಡುವ ಎಲ್ಲಾ ವಿಷಯಗಳಿಂದ ಅವರನ್ನು ದೂರವಿಡುವುದು. ಅಶ್ಲೀಲ ಮತ್ತು ಅಸಭ್ಯ ಸಂಗೀತವನ್ನು ಕೇಳುವುದರಿಂದ ಮತ್ತು ಮಹಿಳೆಯರು, ಕೊಳಕು ಚಲನಚಿತ್ರಗಳು ಮತ್ತು ಕೆಟ್ಟ ಪತ್ರಿಕೆಗಳನ್ನು ನೋಡುವುದರಿಂದ ಅವರನ್ನು ದೂರವಿರಿಸಿ. ಇವುಗಳಿಂದ ನಾವು ನಮ್ಮ ಮಕ್ಕಳನ್ನು ಕಾಪಾಡಬೇಕು. ಆದರೆ, ತಂದೆ ಈ ವಸ್ತುಗಳನ್ನು ತಂದು ಮನೆಯಲ್ಲಿಟ್ಟರೆ,

ಮಕ್ಕಳಲ್ಲಿ ಅಶ್ಲೀಲತೆ ಮತ್ತು ನಿಷೇಧಿತ ಕೃತ್ಯಗಳನ್ನು ಮಾಡಲು ಅದು ಮಾರ್ಗವನ್ನು ಸುಗಮಗೊಳಿಸುತ್ತದೆ (ಅಲ್ಲಾಹು ಕಾಪಾಡಲಿ). ತಂದೆ ಮಕ್ಕಳನ್ನು ಸಂಗೀತ ಕೇಳುವುದು, ಕೊಳಕು ಚಲನಚಿತ್ರಗಳನ್ನು ನೋಡುವುದು, ಕೀಳು ಪತ್ರಿಕೆಗಳನ್ನು ಓದುವುದು ಮುಂತಾದ ಅಲ್ಲಾಹು ನಿಷೇಧಿಸಿದ ವಿಷಯಗಳಿಗೆ ಆಕರ್ಷಿತಗೊಳಿಸುವ ಎಲ್ಲದ್ದರಿಂದಲೂ ದೂರವಿಡಬೇಕು. ಅಲ್ಲಾಹನಿಗೆ ಕೋಪವನ್ನುಂಟುಮಾಡುವ ಎಲ್ಲಾ ವಿಷಯಗಳಿಂದ ಮಕ್ಕಳನ್ನು ರಕ್ಷಿಸುವುದು ತಂದೆಯ ಕರ್ತವ್ಯವಾಗಿದೆ.

## 8. ಮಕ್ಕಳಿಗೆ ನೀತಿವಂತ ಗೆಳೆಯರನ್ನು ಆಯ್ಕೆ ಮಾಡುವುದು

ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಇನ್ನೊಂದು ಅಂಶವೇನೆಂದರೆ, ಅವರಿಗೆ ನೀತಿವಂತ ಗೆಳೆಯರನ್ನು ಆಯ್ಕೆ ಮಾಡುವುದು. ಮಕ್ಕಳ ಗೆಳೆಯರು ಯಾರು ಎಂಬುದರ ಮೇಲೆ ಕಣ್ಣಿಟ್ಟುಕೊಳ್ಳಿ, ಅವರು ಯಾರೊಂದಿಗೆ ನಡೆಯುತ್ತಾರೆ, ಯಾರೊಂದಿಗೆ ಕಾಲ ಕಳೆಯುತ್ತಾರೆ,

ಯಾರೊಂದಿಗೆ ಹರಟೆ ಹೊಡೆಯುತ್ತಾರೆ ಎಂಬುದನ್ನು ಗಮನಿಸುತ್ತಿರಿ. ನಾವು ಈಗಾಗಲೇ ಹೇಳಿದಂತೆ, ಒಬ್ಬ ವ್ಯಕ್ತಿ ತನ್ನ ಜೊತೆಗಾರನ ಧರ್ಮ-ದಲ್ಲಿರುತ್ತಾನೆ. ಮಕ್ಕಳು ತಮ್ಮ ಜೊತೆಗಾರರಿಂದ ಬಹಳ ಪ್ರಭಾವಿತರಾಗುತ್ತಾರೆ.

ಪ್ರವಾದಿ(ﷺ) ರವರು ಹೇಳಿದರು:

«الْمَــــرْءُ عَلَى دِيـــنِ خَلِيلِـــهِ، فَلْيَنْظُرْ أَحَدُكُـــمْ مَـــنْ يُخَالِلُ».

“ಒಬ್ಬ ವ್ಯಕ್ತಿ ತನ್ನ ಆತ್ಮೀಯ ಗೆಳೆಯನ ಧರ್ಮದಲ್ಲಿ-ರುತ್ತಾನೆ. ಆದ್ದರಿಂದ ತಾನು ಯಾರೊಂದಿಗೆ ಸ್ನೇಹ ಬೆಳೆಸುತ್ತೇನೆಂಬುದನ್ನು ನಿಮ್ಮಲ್ಲಿ ಪ್ರತಿಯೊಬ್ಬರೂ ಆಲೋಚಿಸಿ ನೋಡಲಿ.” [ಅಬೂ ದಾವೂದ್ (4833) ತಿರ್ಮಿದಿ (2378)]

ಮಕ್ಕಳು ಯಾರೊಂದಿಗೆ ಬೆರೆಯುತ್ತಾರೆ ಮತ್ತು ಅವರ ಸಂಗಡಿಗರು ಮತ್ತು ಜೊತೆಗಾರರು ಯಾರು ಎಂಬುದನ್ನು ಸೂಕ್ಷ್ಮವಾಗಿ ಗಮನಿಸುವುದು ತಂದೆಯ ಕರ್ತವ್ಯವಾಗಿದೆ. ನೀತಿವಂತಿಕೆ, ಸ್ಥಿರತೆ, ವಿಧೇಯತೆ, ಧರ್ಮನಿಷ್ಠೆಯ

ಜನರೊಂದಿಗೆ ಅವರು ಬೆರೆಯುವುದಾದರೆ; ಅಲ್ಲಾಹನನ್ನು ಸ್ತುತಿಸಿರಿ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ. ಮಾತ್ರವಲ್ಲ, ಅದಕ್ಕಾಗಿ ಮಕ್ಕಳನ್ನು ಪ್ರೋತ್ಸಾಹಿಸಿರಿ. ಆದರೆ ಮಕ್ಕಳು ದುಷ್ಟ, ಭ್ರಷ್ಟ ಜನರೊಂದಿಗೆ, ಪಾಪ ಮತ್ತು ಅಸಭ್ಯತೆಯ ಜನರೊಂದಿಗೆ ಬೆರೆಯುವುದಾದರೆ; ತಕ್ಷಣ ಅವರನ್ನು ಆ ಮಕ್ಕಳಿಂದ ಬೇರ್ಪಡಿಸಿರಿ. ನಿಮಗೆ ಎಷ್ಟೇ ಕಷ್ಟವಾದರೂ ಸಹ.

## 9. ಪವಿತ್ರ ಕುರ್‌ಆನ್ ಅನ್ನು ಪ್ರೀತಿಸುವಂತೆ ಮಕ್ಕಳನ್ನು ಬೆಳೆಸುವುದು

ಪವಿತ್ರ ಕುರ್‌ಆನ್ ಅನ್ನು ಪ್ರೀತಿಸುವಂತೆ ಮಕ್ಕಳನ್ನು ಬೆಳೆಸುವುದು ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಇನ್ನೊಂದು ಅಂಶವಾಗಿದೆ. ಆದ್ದರಿಂದ, ಮಕ್ಕಳಿಗೆ ಕುರ್‌ಆನ್ ಕಲಿಸಲು ಕಾಳಜಿ ವಹಿಸಿರಿ ಮತ್ತು ಕುರ್‌ಆನ್ ಕಂಠಪಾಠ ಮಾಡಲು ಅವರನ್ನು ಪ್ರೋತ್ಸಾಹಿಸಿ.

ಪ್ರವಾದಿ(ﷺ) ರವರು ಹೇಳಿದರು:

«خَيْرُكُمْ مَنْ تَعَلَّمَ الْقُرْآنَ وَعَلَّمَهُ».

"ನಿಮ್ಮಲ್ಲಿ ಕುರ್‌ಆನ್ ಕಲಿತವರು ಮತ್ತು ಕಲಿಸಿದವರೇ ಶ್ರೇಷ್ಠರು" [ಅಬೂ ದಾವೂದ್ (1452)]

ನಾವು ಇದಕ್ಕೆ ಬಹಳ ಪ್ರಾಮುಖ್ಯತೆ ನೀಡಬೇಕಾಗಿದೆ. ನಿಮ್ಮ ಊರಿನಲ್ಲಿ ಕುರ್‌ಆನ್ ಕಂಠಪಾಠ ಮಾಡಲು ಯಾವುದೇ ಸೌಲಭ್ಯಗ-ಳಿಲ್ಲದಿದ್ದರೆ, ಊರಿನ ಜನರು ಒಟ್ಟು ಸೇರಿ ಎಷ್ಟು ಹಣ ಖರ್ಚು ಮಾಡಿಯಾದರೂ ಕುರ್‌ಆನ್ ಕಂಠಪಾಠ ಮಾಡುವ ಒಂದು ಕೇಂದ್ರವನ್ನು ಸ್ಥಾಪಿಸಬೇಕು. ಕುರ್‌ಆನ್ ಕಲಿಯುವುದು, ಕಂಠಪಾಠ ಮಾಡುವುದು ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಒಬ್ಬ ವ್ಯಕ್ತಿ ನೀತಿವಂತನಾಗಲು, ದೇವಭಯವನ್ನು ಹೊಂದಲು ಮತ್ತು ಅಲ್ಲಾಹನ ನಿಯಮಗಳನ್ನು ಕರಾರುವಾಕ್ಕಾಗಿ ಪಾಲಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಸಮುದಾಯದ ಎಲ್ಲರೂ ಈ ವಿಷಯದತ್ತ ಗಮನಹರಿಸಬೇಕಾಗಿದೆ.

## 10. ಮಕ್ಕಳ ಶಾಲಾ ವಿದ್ಯಾಭ್ಯಾಸವನ್ನು ಹತ್ತಿರದಿಂದ ಗಮನಿಸುವುದು

ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಸಹಾಯಕವಾಗುವ ಇನ್ನೊಂದು ಅಂಶವೇನೆಂದರೆ, ಮಕ್ಕಳ ಶಾಲಾ ಶಿಕ್ಷಣವನ್ನು ಹತ್ತಿರದಿಂದ ಗಮನಿಸುವುದು. ಮಕ್ಕಳ ವಿದ್ಯಾಭ್ಯಾಸದ ಪ್ರಗತಿಯನ್ನು ಪರಿಶೀಲಿಸುತ್ತಿರು-ವುದು, ನಿಯಮಿತವಾಗಿ ಶಾಲೆಗೆ ಭೇಟಿಕೊಟ್ಟು ಪ್ರಾಂಶುಪಾಲರನ್ನು ಕಂಡು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ, ನಡವಳಿಕೆಯ ಬಗ್ಗೆ ಕೇಳುತ್ತಿರುವುದು, ಮಕ್ಕಳು ಮನೆಗೆಲಸವನ್ನು ಮಾಡುತ್ತಿದ್ದಾರೆಯೇ ಎಂದು ಗಮನಿಸುವುದು ಇದರಲ್ಲಿ ಒಳಪಡುತ್ತದೆ.

ಸಹೋದರರರೇ, ಇವೆಲ್ಲವೂ ಮಕ್ಕಳನ್ನು ಬೆಳೆಸಲು, ಸದೃಢಗೊಳಿಸಲು ಮತ್ತು ಶಿಸ್ತಿನಲ್ಲಿಡಲು ಕೆಲವು ಸರಳ ಆದರೆ ಉಪಯುಕ್ತ ನಿರ್ದೇಶನಗಳಾಗಿವೆ. ನೀವು ಈಗಾಗಲೇ ಈ ವಿಷಯದ ಬಗ್ಗೆ ಸರಿಯಾಗಿ ಕಾಳಜಿ ವಹಿಸುತ್ತಿದ್ದರೆ, ಖಂಡಿತವಾಗಿಯೂ ನಿಮ್ಮ ಪರಿಶ್ರಮದ ಫಲವನ್ನು ಪಡೆಯುವ-ವರಲ್ಲಿ ನೀವು ಮೊದಲಿಗರಾಗುತ್ತೀರಿ. ನೀವು ನಿಮ್ಮ ಮಕ್ಕಳನ್ನು ಶಿಸ್ತುಬದ್ಧವಾಗಿ ಬೆಳೆಸಿದರೆ

ಅವರು ನೀತಿವಂತರಾಗಿ ಮತ್ತು ಕರ್ತವ್ಯನಿಷ್ಠ-ರಾಗಿ ಬೆಳೆಯುತ್ತಾರೆ. ಅವರು ತಮ್ಮ ಬಾಧ್ಯತೆಗ-ಳನ್ನು ಪೂರೈಸುತ್ತಾರೆ ಮತ್ತು ನಿಮ್ಮ ಹಕ್ಕುಗಳನ್ನೂ ನೆರವೇರಿಸುತ್ತಾರೆ; ಏಕೆಂದರೆ ನೀವು ಅವರನ್ನು ಯಾವ ಧರ್ಮದ ಮೇಲೆ ಬೆಳೆಸಿದ್ದೀರೋ ಆ ಇಸ್ಲಾಂ ಧರ್ಮವು ಅವರಿಗೆ ಸಹಾಯ ಮಾಡುತ್ತದೆ ಮತ್ತು ಈ ಕಾರ್ಯಗಳನ್ನು ಮಾಡುವಂತೆ ನಿರ್ದೇ-ಶಿಸುತ್ತದೆ. ನೀವು ನಿಮ್ಮ ಮಕ್ಕಳನ್ನು ಇಸ್ಲಾಂ ಧರ್ಮದ ಮೇಲೆ ಬೆಳೆಸಿದರೆ, ಅವರು ನಿಮಗೆ ಇಹಲೋಕ ಮತ್ತು ಪರಲೋಕದಲ್ಲಿ ಉಪಕಾರ ಮಾಡುತ್ತಾರೆ. ಅವರು ನಿಮ್ಮ ಹಕ್ಕುಗಳ ಬಗ್ಗೆ ಕಾಳಜಿ ವಹಿಸುತ್ತಾರೆ, ನಿಮಗೆ ವಿಧೇಯರಾಗಿ-ರುತ್ತಾರೆ ಮತ್ತು ನಿಮ್ಮ ನಿಧನದ ಬಳಿಕ ನಿಮ್ಮ ಪರಲೋಕ ಜೀವನದ ಯಶಸ್ಸಿಗಾಗಿ ಮತ್ತು ನಿಮ್ಮ ಕ್ಷಮೆಗಾಗಿ ಅವರು ನಿರಂತರ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಾರೆ.

ಪ್ರವಾದಿ (ﷺ) ರವರು ಹೇಳಿದರು:

«إِذَا مَاتَ الْإِنْسَـــانُ انْقَطَعَ عَنْـــهُ عَمَلُهُ
إِلَّا مِنْ ثَـــلَاثٍ: صَدَقَةٍ جَارِيَـــةٍ، أَوْ عِلْمٍ

يُنْتَفَعُ بِــهِ، أَوْ وَلَدٍ صَالَـــحٍ يَدْعُو لَهُ».

“ಮನುಷ್ಯನು ಇಹಲೋಕ ತ್ಯಜಿಸುವಾಗ, ಮೂರು ವಿಷಯಗಳನ್ನು ಹೊರತುಪಡಿಸಿ ಅವನ ಎಲ್ಲಾ ಕರ್ಮಗಳು ಕೊನೆಗೊಳ್ಳುತ್ತವೆ: ಹರಿಯುತ್ತಿರುವ ದಾನಧರ್ಮ, ಪ್ರಯೋಜನಕಾರಿ ಜ್ಞಾನ ಮತ್ತು ಅವನಿಗಾಗಿ ಪ್ರಾರ್ಥಿಸುವ ನೀತಿವಂತ ಮಕ್ಕಳು.” [ನಸಾಈ (3651)]

ನೀವು ನಿಮ್ಮ ಮಕ್ಕಳನ್ನು ನೀತಿವಂತಿಕೆ, ಸ್ಥಿರತೆ ಮತ್ತು ಅಲ್ಲಾಹನಿಗೆ ವಿಧೇಯತೆ ತೋರುವುದರ ಮೇಲೆ ಬೆಳೆಸಿದರೆ, ಖಂಡಿತವಾಗಿಯೂ ನಿಮ್ಮ ಮರಣದ ನಂತರ ಅವರು ನಿಮ್ಮ ಹಕ್ಕುಗಳನ್ನು ಪಾಲಿಸುತ್ತಾರೆ ಮತ್ತು ನಿಮಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಾರೆ.

﴿ ۞ وَقَضَىٰ رَبُّكَ أَلَّا تَعْبُدُوٓاْ إِلَّآ إِيَّاهُ وَبِٱلْوَٰلِدَيْنِ إِحْسَٰنًاۚ إِمَّا يَبْلُغَنَّ عِندَكَ ٱلْكِبَرَ أَحَدُهُمَآ أَوْ كِلَاهُمَا فَلَا تَقُل لَّهُمَآ أُفٍّ وَلَا تَنْهَرْهُمَا وَقُل لَّهُمَا

قَوۡلٗا كَرِيمٗا ٢٣ وَٱخۡفِضۡ لَهُمَا
جَنَاحَ ٱلذُّلِّ مِنَ ٱلرَّحۡمَةِ وَقُل رَّبِّ
ٱرۡحَمۡهُمَا كَمَا رَبَّيَانِي صَغِيرٗا ٢٤

“ತನ್ನ ಹೊರತು ಬೇರೆ ಯಾರನ್ನೂ ಆರಾಧಿಸಬಾರದೆಂದು ನಿನ್ನ ಪರಿಪಾಲಕನು (ಅಲ್ಲಾಹು) ಆಜ್ಞಾಪಿಸಿದ್ದಾನೆ. ನೀವು ನಿಮ್ಮ ಹೆತ್ತವರಿಗೆ ಕರ್ತವ್ಯನಿಷ್ಠರಾಗಿರಬೇಕು. ಅವರಲ್ಲಿ ಒಬ್ಬರು ಅಥವಾ ಇಬ್ಬರೂ ನೀವು ಬದುಕಿರುವಾಗಲೇ ವೃದ್ಧಾಪ್ಯವನ್ನು ತಲುಪಿದರೆ, ಅವರಿಗೆ ಅಗೌರವದ ಒಂದು ಪದವನ್ನೂ ಹೇಳಬೇಡಿ, ಅವರ ಮೇಲೆ ರೇಗಬೇಡಿ; ಅವರಿಗೆ ಗೌರವದ ಮಾತುಗಳನ್ನೇ ಹೇಳಿರಿ. ಕರುಣೆಯಿಂದ ಕೂಡಿದ ನಮ್ರತೆಯ ರೆಕ್ಕೆಗಳನ್ನು ಅವರಿಗೆ ತಗ್ಗಿಸಿಕೊಡಿ. ಓ ನನ್ನ ಪರಿಪಾಲಕನೇ! ನಾನು ಚಿಕ್ಕವನಿದ್ದಾಗ ಅವರು ನನ್ನನ್ನು ಸಾಕಿ ಬೆಳೆಸಿದಂತೆಯೇ ಅವರಿಗೆ ದಯೆ ತೋರು ಎಂದು ಪ್ರಾರ್ಥಿಸಿ.” [ಸೂರ ಇಸ್ರಾ 17:23-24]

ಚಿಕ್ಕ ವಯಸ್ಸಿನಿಂದಲೇ ನೀವು ಮಕ್ಕಳಿಗೆ ಈ ಶ್ಲೋಕವನ್ನು ಕಲಿಸಿ ಬೆಳೆಸಿದರೆ, ಅವರು ಅದರ

ಆಧಾರದಲ್ಲೇ ಬೆಳೆಯುತ್ತಾರೆ. ಆದರೆ ನೀವು ಹಾಗೆ ಮಾಡದಿದ್ದರೆ, ಅವರು ಅದಕ್ಕೆ ವಿರುದ್ಧವಾಗಿ ಬೆಳೆಯುತ್ತಾರೆ. ನೀವು ಅವರಿಗೆ ಬಾಲ್ಯದಿಂದಲೂ ಧರ್ಮನಿಷ್ಠೆಯನ್ನು, ಕುಟುಂಬ ಸಂಬಂಧ ಜೋಡಿಸುವುದನ್ನು ಕಲಿಸಿದರೆ, ಅವನು ಧರ್ಮ-ನಿಷ್ಠೆಯೊಂದಿಗೆ ಮತ್ತು ಉತ್ತಮ ಕುಟುಂಬ ಸಂಬಂಧದೊಂದಿಗೆ ಪ್ರಬುದ್ಧರಾಗುತ್ತಾರೆ.

ಬೆಳೆದು ದೊಡ್ಡವನಾದ ಮಗನೊಂದಿಗೆ ತಂದೆ ಕೇಳುತ್ತಾರೆ: “ಓ ನನ್ನ ಮಗನೇ, ನೀನೇಕೆ ನನ್ನ ಹಕ್ಕುಗಳನ್ನು ನೆರವೇರಿಸುವುದಿಲ್ಲ?” ಮಗ ಉತ್ತ-ರಿಸುತ್ತಾನೆ: “ನೀವು ಬಾಲ್ಯದಲ್ಲಿ ನನ್ನ ಹಕ್ಕುಗಳನ್ನು ನೆರವೇರಿಸಿದ್ದರೆ ಈಗ ನಾನು ನಿಮ್ಮ ಹಕ್ಕುಗಳನ್ನು ನೆರವೇರಿಸುತ್ತಿದ್ದೆ.” ತಂದೆ-ಮಕ್ಕಳ ಸಂಬಂಧ ಹೀಗಾಗದಿರಲಿ ಎಂದು ಆಶಿಸೋಣ. ಹೆಚ್ಚಿನ ಸಂದರ್ಭಗಳಲ್ಲೂ, ಬಾಲ್ಯದಲ್ಲಿ ತಂದೆ ಮಕ್ಕಳನ್ನು ನಿರ್ಲಕ್ಷಿಸಿದರೆ ಮತ್ತು ಸರಿಯಾಗಿ ನೋಡಿ-ಕೊಳ್ಳದಿದ್ದರೆ ಅಥವಾ ಶಿಸ್ತು ಕಲಿಸದಿದ್ದರೆ, ವೃದ್ಧನಾಗುವಾಗ ಮಕ್ಕಳು ಅವನನ್ನು ನಿರ್ಲಕ್ಷಿಸು-ತ್ತಾರೆ ಮತ್ತು ತಿರಸ್ಕರಿಸುತ್ತಾರೆ. ಅಲ್ಲಾಹು ಸನ್ಮಾರ್ಗ ತೋರಿಸಿದವರ ಹೊರತು.

ಇಬ್ನುಲ್ ಕಯ್ಯಿಮ್ (ﷀ) ಹೇಳಿದರು:

إِنَّ الْآبَـــاءَ يَـــوْمَ الْقِيَامَةِ يُسْـــأَلُونَ عَنْ حُقُوقِ الْأَبْنَـــاءِ قَبْـــلَ الْأَبْنَاءِ.

“ಪುನರುತ್ಥಾನ ದಿನದಂದು ತಂದೆಯ ಹಕ್ಕುಗಳ ಬಗ್ಗೆ ಮಕ್ಕಳಲ್ಲಿ ಪ್ರಶ್ನಿಸುವುದಕ್ಕೆ ಮೊದಲು ಮಕ್ಕಳ ಹಕ್ಕುಗಳ ಬಗ್ಗೆ ತಂದೆಯಲ್ಲಿ ಪ್ರಶ್ನಿಸಲಾಗುತ್ತದೆ.”

ತಂದೆಯ ಹಕ್ಕುಗಳನ್ನು ಪ್ರಶ್ನಿಸುವ ಮೊದಲು ಮಕ್ಕಳ ಹಕ್ಕುಗಳ ಬಗ್ಗೆ ಏಕೆ ಪ್ರಶ್ನಿಸಲಾಗುತ್ತದೆ? ಏಕೆಂದರೆ ಅಲ್ಲಾಹು ಹೇಳುತ್ತಾನೆ:

﴿وَوَصَّيْنَا ٱلْإِنسَـٰنَ بِوَٰلِدَيْهِ إِحْسَـٰنًا﴾

“ಮನುಷ್ಯನಿಗೆ ನಾವು ಅವನ ಮಾತಾಪಿತರಿಗೆ ಕರ್ತವ್ಯನಿಷ್ಠನಾಗಿರಲು ಆದೇಶಿಸಿದ್ದೇವೆ.” [ಸೂರ ಅಹ್ಕಾಫ್ 46:15]

ಮತ್ತು ಅದೇ ಸಮಯದಲ್ಲಿ ಅಲ್ಲಾಹು ಹೇಳುತ್ತಾನೆ:

﴿يَٰٓأَيُّهَا ٱلَّذِينَ ءَامَنُواْ قُوٓاْ أَنفُسَكُمۡ وَأَهۡلِيكُمۡ نَارًا﴾

"ಓ ಸತ್ಯವಿಶ್ವಾಸಿಗಳೇ! ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ನರಕಾಗ್ನಿಯಿಂದ ರಕ್ಷಿಸಿರಿ."

ಮಕ್ಕಳು ತಮ್ಮ ಹೆತ್ತವರಿಗೆ ಕರ್ತವ್ಯನಿಷ್ಠರಾಗಿ-ರಬೇಕೆಂದು ಆಜ್ಞಾಪಿಸಿದಂತೆಯೇ, ಮಕ್ಕಳನ್ನು ನೀತಿವಂತರನ್ನಾಗಿ ಬೆಳೆಸಲು ಮತ್ತು ಅವರನ್ನು ನರಕಾಗ್ನಿಯಿಂದ ರಕ್ಷಿಸಲು ಅಲ್ಲಾಹು ಹೆತ್ತವರಿಗೆ ಆದೇಶಿಸಿದ್ದಾನೆ. ಆದ್ದರಿಂದ, ಪುನರುತ್ಥಾನ ದಿನದಂದು ನಿಮ್ಮ ಮಕ್ಕಳ ಬಗ್ಗೆ ನಿಮ್ಮೊಂದಿಗೆ ಪ್ರಶ್ನಿಸಲಾಗುವುದು.

ನಾವು ಈಗಾಗಲೇ ಉಲ್ಲೇಖಿಸಿದಂತೆ ಅಬ್ದುಲ್ಲಾ ಬಿನ್ ಉಮರ್(ﷺ) ಹೇಳುತ್ತಾರೆ:

**أَدِّبْ وَلَـــدَكَ، فَإِنَّكَ مَسْـــؤُولٌ عَنْهُ يَوْمَ الْقِيَامَةِ بِمَـــا أَدَّبْتَهُ وَمَـــاذَا عَلَّمْتَهُ؟**

"ನಿಮ್ಮ ಮಕ್ಕಳಿಗೆ ಶಿಸ್ತು ಕಲಿಸಿರಿ; ನೀವು ಅವರಿಗೆ

ಯಾವ ರೀತಿಯಲ್ಲಿ ಶಿಸ್ತು ಕಲಿಸಿದ್ದೀರಿ ಮತ್ತು ಅವರಿಗೆ ಏನು ಕಲಿಸಿದ್ದೀರಿ ಎಂದು ಪುನರುತ್ಥಾನ ದಿನದಂದು ಅಲ್ಲಾಹು ನಿಮ್ಮಲ್ಲಿ ಪ್ರಶ್ನಿಸುತ್ತಾನೆ."

ನೀವು ಮಕ್ಕಳನ್ನು ಹೇಗೆ ಬೆಳೆಸಿದ್ದೀರಿ ಎಂದು ನಿಮ್ಮನ್ನು ಪ್ರಶ್ನಿಸುವಂತೆಯೇ ಮಕ್ಕಳು ತಂದೆ-ತಾಯಿಗೆ ತೋರಿದ ಕರ್ತವ್ಯನಿಷ್ಠೆ ಮತ್ತು ವಿಧೇಯತೆಯ ಬಗ್ಗೆ ಅವರೊಡನೆ ಪ್ರಶ್ನಿಸಲಾಗುತ್ತದೆ.

ಆದ್ದರಿಂದ ಸಹೋದರರೇ, ಇದೊಂದು ದೊಡ್ಡ ಜವಾಬ್ದಾರಿ ಮತ್ತು ವಿಶ್ವಸ್ತತೆಯಾಗಿದ್ದು, ನಾವು ಅದಕ್ಕೆ ಸೂಕ್ತ ಕಾಳಜಿ ಮತ್ತು ಪ್ರಾಮುಖ್ಯತೆಯನ್ನು ನೀಡಬೇಕು. ವಿದ್ವಾಂಸರು ಈ ವಿಷಯದ ಬಗ್ಗೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ ಮತ್ತು ವಿವರಣೆಗಳನ್ನು ನೀಡಿದ್ದಾರೆ. ಅವುಗಳ ಪೈಕಿ ನಾನು ಶಿಫಾರಸು ಮಾಡುವ ಒಂದು ಪುಸ್ತಕ ಯಾವುದೆಂದರೆ, ಇಬ್ನುಲ್ ಕಯ್ಯಿಮ್ ರಚಿಸಿದ "ತುಹ್ಫತುಲ್ ವದೂದ್ ಫೀ ಅಹ್ಕಾಮಿಲ್ ಮೌಲೂದ್". ಇದು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಶೈಶವಾವಸ್ಥೆಯಿಂದಲೇ ಮಕ್ಕಳನ್ನು ಬೆಳೆಸುವ, ಅವರಿಗೆ ಶಿಕ್ಷಣ ನೀಡುವ,

ಅವರನ್ನು ಪ್ರಬುದ್ಧರನ್ನಾಗಿ ಮಾಡುವ ಎಲ್ಲಾ ವಿಷಯಗಳನ್ನು ಒಳಗೊಂಡಿದೆ. ಇದು ಮಕ್ಕಳನ್ನು ಬೆಳೆಸುವ ವಿಷಯಕ್ಕೆ ಸಂಬಂಧಿಸಿದಂತೆ ಅತ್ಯಂತ ಮೌಲ್ಯಯುತ ಪುಸ್ತಕವಾಗಿದೆ. ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು ಕೂಡ ಇದರಲ್ಲಿದೆ. ಮಕ್ಕಳನ್ನು ದೈಹಿಕ ಆರೋಗ್ಯ, ಆಧ್ಯಾತ್ಮಿಕತೆ ಮತ್ತು ಧಾರ್ಮಿಕತೆಗೆ ಸಂಬಂಧಿಸಿದ, ಮಕ್ಕಳಿರುವವರು ಅಗತ್ಯವಾಗಿ ತಿಳಿದಿರಬೇಕಾದ ಅನೇಕ ಅದ್ಭುತ ಅಂಶಗಳನ್ನು ಅವರು ಈ ಪುಸ್ತಕದಲ್ಲಿ ಉಲ್ಲೇಖಿ-ಸಿದ್ದಾರೆ. ಇದು ಖಂಡಿತವಾಗಿಯೂ ಸಂಗ್ರಹಿಸಲು, ಓದಲು ಮತ್ತು ಪ್ರಯೋಜನ ಪಡೆಯಲು ನಾನು ಶಿಫಾರಸು ಮಾಡುವ ಅತ್ಯುತ್ತಮ ಪುಸ್ತಕವಾಗಿದೆ.

ಕೊನೆಯದಾಗಿ, ಸಹೋದರರೇ, ನಾವು ಮಾತನಾಡುತ್ತಿರುವ ಈ ವಿಷಯವು ಬಹಳ ಗಂಭೀರವಾಗಿದ್ದು ನಾವು ಅದಕ್ಕೆ ಸಾಧ್ಯವಾದಷ್ಟು ಪ್ರಾಮುಖ್ಯತೆಯನ್ನು ನೀಡಬೇಕು ಎಂದು ನಾನು ಪುನರುಚ್ಚರಿಸಲು ಮತ್ತು ಒತ್ತಿಹೇಳಲು ಬಯಸುತ್ತೇನೆ. ವಿದ್ವಾಂಸರು ಹೇಳುತ್ತಾರೆ: “ವಾಸ್ತವವಾಗಿ, ಮಕ್ಕಳು ಭ್ರಷ್ಟರಾಗಲು ಸಾಮಾನ್ಯವಾಗಿ ಅಥವಾ ಹೆಚ್ಚಾಗಿ ತಂದೆಯಂದಿರೇ ಕಾರಣ.”

ಸಹೋದರರೇ, ಈ ಜವಾಬ್ದಾರಿ ಮತ್ತು ಹೊಣೆಗಾರಿಕೆಗೆ ಮಹತ್ವ ಮತ್ತು ಕಾಳಜಿಯನ್ನು ನೀಡುವುದು ಕಡ್ಡಾಯವಾಗಿದೆ. ಇದರಿಂದ ನಾವು ಇಹಲೋಕದಲ್ಲಿ ನಮ್ಮ ಮಕ್ಕಳ ಕರ್ತವ್ಯನಿಷ್ಠೆಯ-ನ್ನು ಆನಂದಿಸಬಹುದು ಮತ್ತು ಪರಲೋಕದಲ್ಲಿ ನಮ್ಮ ಮರಣದ ನಂತರ ನಮಗಾಗಿ ಅವರು ಮಾಡುವ ಪ್ರಾರ್ಥನೆಯ ಫಲವನ್ನು ಅತ್ಯಂತ ಕರುಣಾಮಯಿ ಮತ್ತು ಉದಾರನಾದ ಅಲ್ಲಾಹನಿಂದ ಪಡೆಯಬಹುದು.

ಕೊನೆಯಲ್ಲಿ, ನಾನು ಅಲ್ಲಾಹನಲ್ಲಿ ಅವನ ಸುಂದರವಾದ ಹೆಸರುಗಳು ಮತ್ತು ಉನ್ನತ ಗುಣಲಕ್ಷಣಗಳ ಮೂಲಕ, ನಮ್ಮ ಮಕ್ಕಳನ್ನು ಸರಿದಾರಿಯಲ್ಲಿ ಮಾಡುವಂತೆ ಬೇಡುತ್ತೇನೆ. ಓ ಅಲ್ಲಾಹ್, ನಮ್ಮ ಮಕ್ಕಳನ್ನು ಮತ್ತು ನಮ್ಮ ಉದ್ದೇಶಗಳನ್ನು ಸರಿಪಡಿಸು. ಓ ಅಲ್ಲಾಹ್, ನಮಗೆ ಕರ್ತವ್ಯನಿಷ್ಠ, ನೀತಿವಂತ ಮಕ್ಕಳನ್ನು ಕರುಣಿಸು. ಓ ಅಲ್ಲಾಹ್, ನಮ್ಮ ಮಕ್ಕಳು ಭ್ರ-ಷ್ಟರಾಗುವುದರಿಂದ ನಾವು ನಿನ್ನಲ್ಲಿ ಅಭಯ ಕೋರುತ್ತೇವೆ. ಓ ಅಲ್ಲಾಹ್, ಅವರ ರಕ್ಷಣೆ, ಕಾಳಜಿ, ಬೆಳವಣಿಗೆ ಮತ್ತು ಒಳ್ಳೆಯತನ-ಕ್ಕೆ ಮಾರ್ಗದರ್ಶನ ನೀಡಬೇಕೆಂದು ನಾವು

ನಿನ್ನಲ್ಲಿ ಬೇಡುತ್ತೇವೆ; ನಿನಗೆ ವಿಧೇಯರಾಗಲು, ನಿನ್ನನ್ನು ಸ್ಮರಿಸಲು ಮತ್ತು ಪೂರ್ಣ ರೂಪದಲ್ಲಿ ನಿನ್ನ ಆರಾಧನೆಯನ್ನು ನಿರ್ವಹಿಸಲು ನಮಗೆ ಸಹಾಯ ಮಾಡು. ಓ ಅಲ್ಲಾಹ್, ಒಳಿತಾಗಿರುವ ಎಲ್ಲವನ್ನೂ ಮಾಡುವ ಭಾಗ್ಯವನ್ನು ನೀಡು, ನಾವು ಕಲಿತ ವಿಷಯಗಳು ನಮಗೆ ಉಪಕಾರವಾಗು-ವಂತೆ ಮಾಡು, ನಮಗೆ ಉಪಕಾರವಾಗುವುದನ್ನು ಮಾತ್ರ ನಾವು ಕಲಿಯುವಂತೆ ಮಾಡು. ಒಳ್ಳೆಯ ಸಲಹೆಯನ್ನು ಕೇಳಿದರೆ ಅದನ್ನು ಅನುಸರಿಸುವ ಭಾಗ್ಯವನ್ನು ಕರುಣಿಸು.

ನಮ್ಮ ಪ್ರವಾದಿ ಮುಹಮ್ಮದ್(ﷺ) ರವರ ಮೇಲೆ, ಅವರ ಕುಟುಂಬದ ಮೇಲೆ, ಅವರ ಸಂಗಡಿಗರ ಮೇಲೆ ಮತ್ತು ಅವನ್ನು ಉತ್ತಮ ರೀತಿಯಲ್ಲಿ ಅನುಸರಿಸಿದ ಎಲ್ಲರ ಮೇಲೂ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ.

⇐ ವಿಷಯಸೂಚಿ




ಮುಖಪುಟಕ್ಕೆ ಮರಳಲು
ಇಲ್ಲಿ ಸ್ಪರ್ಶಿಸಿ